International Journal of Kannada Research
www.kannadajournal.com

ISSN: 2454–5813
IJKR 2023; 9(2): 3640-3645
© 2023 IJKR
www.kannadajournal.com
Received: 26-03-2023
Accepted: 29-05-2023

**ಡಾ.ವಿನಯ್ ಎಂ**
ಸಹಾಯಕ ಪ್ರಾಧ್ಯಾಪಕ,
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ,
ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ, ಕರ್ನಾಟಕ, ಭಾರತ

Corresponding Author:
**ಡಾ.ವಿನಯ್ ಎಂ**
ಸಹಾಯಕ ಪ್ರಾಧ್ಯಾಪಕ,
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ,
ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ, ಕರ್ನಾಟಕ, ಭಾರತ

# ಯುವಕರಲ್ಲಿ ಜಾನಪದ ಕಲೆಗಳ ಬಗೆಗಿನ ಆಸಕ್ತಿ ಕುರಿತು ಒಂದು ಅಧ್ಯಯನ

**ಡಾ.ವಿನಯ್ ಎಂ**

## ಪೀಠಿಕೆ

ಜೀವನದ ಸವಿಬಾಳು ಸಂಸ್ಕೃತಿಯೇ ಭಾರತ ದೇಶದ ಆಚಾರ–ವಿಚಾರಗಳ ಪ್ರತಿಬಿಂಬವಾಗಿದೆ. ಶಿಲ್ಪಕಲೆ, ನೃತ್ಯಕಲೆ, ಚಿತ್ರಕಲೆ ಭಾಷಣ ಕಲೆ ಸಂಗೀತ ಮತ್ತು ಸಾಹಿತ್ಯದಂತಹ ಹತ್ತಾರು ಕಲೆಗಳನ್ನೊಳಗೊಂಡ ದೇಶ ಭಾರತ. ನಮ್ಮ ದೇಶದಲ್ಲಿರುವಂತಹ ವಿಶಿಷವಾದ ಸಂಸ್ಕೃತಿ, ಸಂಪ್ರದಾಯಗಳನ್ನು ಬೇರಾವ ದೇಶದಲ್ಲೂ ಕಾಣಲು ಸಾದ್ಯವಿಲ್ಲ. ಸರ್ವಧರ್ಮಗಳ ಸಮನ್ವಯ ಭಾರತದೇಶ. ಅದ ಭಾರತವು ಸಂಸ್ಕ್ರತಿ, ಸಂಪ್ರದಾಯಗಳ ನೆಲೆಬೀಡು, ಕಲೆಯೇ ಇಲ್ಲಿನ ಜನರ ಪ್ರತಿಬಿಂಬವಾಗಿ ತೋರುವ ಮರು ಬಿಂಬವೇ ಜಾನಪದ. ಆನಪದ ಕಲೆ ತನ್ನದೆ ಆದ ಐತಿಹಾಸಿಕ ಹಿನ್ನೆಲೆಯನ್ನು ಹೊದಿದೆ. ಎಲ್ಲಾ ಕಲೆಗಳಿಗಿಂತಲೂ ಜಾನಪದ ಕಲೆ ವಿಬಿನ್ನ ಎಂದು ಗುರುತಿಸಿಕೊಡಿದೆ.

ಪುರಾತನ ಕಾಲದಲ್ಲಿ ಜಾನಪದ ಕಲೆ ಒಂದು ರೀತಿಯ ಸಂವಹನ ಪ್ರಕ್ರಿಯೆಯಾಗಿತ್ತು. ಹಬ್ಬಹರಿದಿನಗಳ ಆಚರಣೆ, ಸಂಬಂದಗಳ ನಡುವಿನ ಬಾಂದವ್ಯ, ಭಾವನೆಗಳ ಸೆಳೆತ, ಕೃಷಿ ಕಾರ್ಯ ಹೀಗೆ ಹುಟ್ಟಿನಿಂದ ಸಾವಿನ ತನಕ ದಿನನಿತ್ಯದ ಕೌಟುಂಬಿಕ ಚಟುವಟಿಕೆಗಳನ್ನು ಹಾಡಿನ ಮೂಲಕ ಬಾಯಿಂದ ಬಾಯಿಗೆ ಪಸರಿಸುತ್ತಾ ಬಂದಂತಹ ಕಲೆಯಾಗಿದೆ. ಅದರಲ್ಲೂ ಹಳ್ಳಿಗಾಡು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಹಾಡಿನ ಮೂಲಕವೇ ಕಟ್ಟಿದ ಲಾವಣಿ ಹಾಡು ಪದಗಳು, ಸುಗ್ಗಿ ಕುಣಿತ, ಕರಗ, ಕೋಲಾಟ, ಬಯಲಾಟ, ತೂಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟ ಇನ್ನೂ ಅನೇಕ ಬಗೆಯ ರೂಪಕಗಳನ್ನು ಕಥಾ ಪ್ರಸಂಗಗಳನ್ನು ಪ್ರಸ್ತುತ ಪಡಿಸುತ್ತಿದ್ದರು. ವಂಶ ಪಾರ್ಯಂಪರ್ಯವಾಗಿ ಇಂದಿಗೂ ಆ ಸಂಸ್ಕ್ಕತಿಯನ್ನು ಪಾಲಿಸಲಾಗುತ್ತಿದೆ. ಅದು ಆಯಾ ಜಾತಿ, ಧರ್ಮ ಮತ್ತು ಪಂಗಂಡದ ಸಂಸ್ಕೃತಿಯನ್ನು ತೋರುವಂತಹದ್ದಾಗಿದೆ. [ ಡಾ.ತಲ್ವಾಡಿ ಬಿ.ಎಸ್,2010].

ಕರ್ನಾಟಕ ಸಮೃದ್ಧ ಜನಪದ ನಾಡು. ಕರ್ನಾಟಕದಲ್ಲಿ ನೂರಕ್ಕೂ ಹೆಚ್ಚು ಜನಪದ ಕಲೆಗಳಿವೆ. ಒಂದೊಂದು ಕಲೆಯೂ ತನ್ನದೆ ಆದ ವೈಷಿಷ್ಟ್ಯವನ್ನು ಹೊಂದಿದೆ. ಜನಪದ ಕಲೆಗಳ ಹುಟ್ಟು ಬೆಳವಣಿಗೆಗೆ ಪರಿಸರವೆ ಶಾಲೆ. ಅನುಭವ ಗುರುವಾಗಿದೆ. ಜಾನಪದ ಕಲೆಯ ಆರಂಭದಲ್ಲಿ ದೇವರನ್ನ ಸ್ಮರಿಸಲು ನಂತರದಲ್ಲಿ ಮನೊರಂಜನೆಗಾಗಿ, ದುಡಿಮೆಯ ದಣಿವು ನಿವಾರಿಸಿಕೊಳ್ಳಲು ಪದ ಕಟ್ಟಲಾರಂಬಿಸಿದರು. ಇಂತಹ ಕಲೆ ಸಂಸ್ಕೃತಿಯ ಮೌಲ್ಯವನ್ನು ಹೆಚ್ಚಿಸಿ, ಸಾಂಸ್ಕೃತಿಕ ಸಂಪತ್ತನ್ನು ವಂಶ ಪಾರಂಪರ್ಯವಾಗಿ ಮುಂದುವರೆಸಿಕೊಡು ಹೋಗಲು ಕಾರಣಿಭೂತವಾಗಿದೆ.

ಸಾಮನ್ಯವಾಗಿ ಅಂದಿನ ಕಾಲದಲ್ಲಿ ಹೊಲ ಗದೆಗಳಿಂದ ಜನರು ಮನೆಗೆ ತೆರಳುವಾಗ ವಿಶ್ರಾಂತಿಸುವಾಗ ಮನರಂಜನೆಗಾಗಿ ಆರಂಭಿಸಲಾದ ಜಾನಪದ ಕಲೆ, ತದನಂತರದಲ್ಲಿ ಮಾಹಿತಿ ನೀಡುವ ಮಾದ್ಯಮವಾಯಿತು. ದೇವರ ಮಹಿಮೆ, ರಾಜರ ಆಳ್ವಿಕೆ ವೈಖರಿ, ಸ್ಥಳ ಪುರಾಣ ವಿಶೇಷಗಳು, ವಂಶದ ಹಿನ್ನೆಲೆ ಬಗ್ಗೆ ಪದಗಳನ್ನು ಕಟ್ಟಿ ಹಾಡುತ್ತಿದ್ದರು. ವಿಶೇಷವಾಗಿ ಸ್ವಾತಂತ್ರ್ಯ ಸಂದರ್ಭದಲ್ಲಿ ಯುವಜನತೆಯನ್ನು ಹೋರಾಟಕ್ಕೆ ಸಿದ್ಧಗೊಳಿಸಲು ಜಾನಪದ ಕಲೆಯನ್ನು ಬಳಸುತ್ತಿದ್ದರು. ನಂತರದ ದಿನಗಳಲ್ಲಿ ಸಾಮಾಜಿಕ ವಿಷಯಗಳ ಬಗ್ಗೆ ಅರಿವು ಮೂಡಿಸುವಲ್ಲಿ ಜಾನಪದ ಪ್ರಮುಖ ಪಾತ್ರ ವಹಿಸತೊಡಗಿತು. ಬಾಲ್ಯವಿವಾಹ, ವರದಕ್ಷಿಣೆ,ಜಾನಪದವನ್ನು ಯಾವುದೋ ಒಂದು ಕ್ಷೇತ್ರದಲ್ಲಿ ಮಾತ್ರ ಗಮನಿಸದೆ ಬೇರೆ ಬೇರೆ ಕ್ಷೇತ್ರದಲ್ಲೂ ಕಾಣಲು ಸಾದ್ಯವಾಗಿದೆ.

**ಸಾಹಿತ್ಯ ವಿಮರ್ಶೆ:** ಜಾನಪದ ಮತ್ತು ಸಮೂಹ ಸಂವಹನ ಮಾಧ್ಯಮಗಳ ನಡುವಿನ ಸಂಬಂಧ: ಆಧುನಿಕ ಸಮೂಹ ಮಾಧ್ಯಮಗಳು ಇಂದು ವಿಶೇಷವಾಗಿ ಜಾನಪದ ಸಮೂಹ ಸಂವಹನ ಮಾಧ್ಯಮಗಳ ಆಕರ್ಷಣೆಗಾಗಿ ಒಳಗಾಗಿ, ಜಾನಪದ ಮಾಧ್ಯಮಗಳ ತಂತ್ರ, ಶೈಲಿ ಹಾಗೂ ಮೂಲ ಆವರಣವನೇ ಬಳಸಿಕೊಂಡು ಹೆಚ್ಚು ಹೆಚ್ಚಾಗಿ ಪರಿಣಾಮಕಾರಿಯಾಗುತ್ತಿರುವುದು ಗಮನಾರ್ಹವಾಗಿದೆ. ಒಂದು ಜನಸಮುದಾಯ ಮನಸ್ಸನ್ನು ತಟ್ಟುವಲ್ಲಿ ಪರಂಪರಾಗತವಾಗಿ ಬಂದಿರುವ ಜಾನಪದ ಮಾಧ್ಯಮಗಳು, ಆಧುನಿಕ ಸಮಾಜದಲ್ಲೂ ತಮ್ಮ ಜೀವತಿಕೆಯನ್ನು ಉಳಿಸಿಕೊಂಡು ಬರುತ್ತಲೇ ಇವೆ. ಜಗತ್ತಿನ ಯೋಚನೆಗಳನ್ನು ಅಪಾರ ಜನಸ್ತೋಮಕ್ಕೆ ಪರಿಣಾಮಕಾರಿಯಾಗಿದೆ, ಪ್ರಭಾವಯುತವಾಗಿ ತಿಳಿಸಲು ಈ ಜಾನಪದ ಮಾಧ್ಯಮಗಳೇ ಮುಖ್ಯ ಸಾಧನಗಳಾಗಿರುವ ಸಂಗತಿ ನಿರ್ವಿವಾದ. ಬಾರತದಂತಹ ಹಲವು ಭಾಷೆ,ಧರ್ಮ,ವಿಬಿನ್ನ ಸಂಸ್ಕೃತಿಯನ್ನು ಹೊಂದಿರುವ ಮತ್ತು ಅನಕ್ಷರಸ್ತರ ಅಧಿಕ ಸಂಖ್ಯೆಯಲ್ಲಿ ಹೊದಿರುವ ದೇಶದಲ್ಲಿ, ಜಾನಪದ ಮಾಧ್ಯಮಗಳ ಮಹತ್ವ ಅಧಿಕವಾಗುತ್ತದೆ. ಭಾರತದಲ್ಲಿ ಸುಮಾರು 20–25 ವರ್ಷಗಳಿಂದಲ್ಲೂ ಜಾನಪದ ಪ್ರದರ್ಶನ ಕಲೆಗಳನ್ನು ಸಮೂಹ ಸಂವಹನ ಮಾಧ್ಯಮಗಳಿಗೆ ಅಳವಡಿಸಿಕೊಳ್ಳುವ ಪ್ರಯತ್ನ ನಡೆದಿದ್ದರೂ, ದೂರದರ್ಶನ ಬಂದ ಮೇಲೆ ಈ ಕಾರ್ಯವು ಹೆಚ್ಚು ಯಶಸ್ವಿಯಾಗಿ ನೆಡೆಯುತ್ತಿದೆ.

ಪ್ರಾಚೀನ ಜಾನಪದ ಕಲೆಗಳಾದ ಸೂತ್ರದ ಗೊಂಬೆಯಾಟ, ತೊಗಲುಗೊಂಬೆಯಾಟ, ತೊಗಲುಗೊಂಬೆಯಾಟಗಳ ತಂತ್ರ-ವಿನ್ಯಾಸ-ವೈಶಿಷ್ಟ್ಯಗಳನ್ನು ದೂರದರ್ಶನದಲ್ಲಿ ಅಳವಡಿಸಿಕೊಂಡು ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಹಲವಾರು ಸಮಸ್ಯೆಗಳನ್ನು ಮತ್ತು ಅದಕ್ಕೆ ತಕ್ಕ ಪರಿಹಾರವನ್ನು ತಿಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವೃತ್ತ ಪತ್ರಿಕೆ, ನಾಟಕ-ರಂಗಭೂಮಿ, ಆಕಾಶವಾಣಿ, ದೂರದರ್ಶನಗಳಿಂದ ಸಂವಹನಗೊಳ್ಳುತ್ತಿರುವ ಸುದ್ದಿಗಳು ಕೇವಲ ಶಿಷ್ಟ ತಂತ್ರವಿಜ್ಞಾನದಿಂದ ಮಾತ್ರ ಜನಸಾಮಾನ್ಯರನ್ನು ತಟ್ಟಲು ಸಾಧ್ಯವಾಗುವುದಿಲ್ಲ. ಜನರಿಗೆ ತಮ್ಮ ಅರಿವಿಗೆ ಸಿಲುಕಿವ ಅನುಭವ ಹಾಗೂ ಪರಿಸರಕ್ಕೆ ಭಿನ್ನವಾದ ಜಾನಪದೀಯ ಆವಣವಿದ್ದರೆ ಮಾತ್ರ ಅವರು ಮೈಯಲ್ಲಾ ಕಿವಿಯಾಗಿ ಆಲಿಸಬಲ್ಲರು. ಮೈಯೆಲ್ಲಾ ಕಣ್ಣಾಗಿ ನೋಡಬಲ್ಲರು, ಸಮಾಜದ ಎಲ್ಲಸ್ತರದ ಜನರಿಗೂ ಸಂಬಂಧವನ್ನು ಏರ್ಪಡಿಸುವಲ್ಲಿ ಜಾನಪದ ಸಮೂಹ ಮಾಧ್ಯಮಗಳೇ ಬಲವಾದ ಆಕರಗಳಾಗುತ್ತವೆ. ಕಂಠಸ್ಥವಲ್ಲದ ಜಾನಪದ ಬದುಕಿನ ಸಾರಸರಾಯವನ್ನೊಳಗೊಡ ಜಾನಪದ ಸಂಸ್ಕೃತಿಗೂ, ಶಿಷ್ಟ ಸಂಸ್ಕೃತಿಗೂ ಸಂಬಂಧ ಏರ್ಪಡಿಸುವಲ್ಲಿ ಶಿಷ್ಟ ಸಮೂಹ ಮಾಧ್ಯಮಗಳ ನೆರವಿಲ್ಲದೆ ಶಿಷ್ಟ ಮಾಧ್ಯಮಗಳು ಪರಿಪೂರ್ಣತೆಯನ್ನು ಸಾದಿಸಲು ಸಾಧ್ಯವಾಗುವುದಿಲ್ಲ. ಯಾವುದೇ ಭಾಷೆಯ ಬಳಕೆಯಿಲ್ಲದೇ ಕೇವಲ ಸಂಜ್ಞೇ, ಸಂಕೇತಗಳ ಮೂಲಕ ತಿಳಿಸುವ ಅಭಿಪ್ರಾಯಗಳನ್ನು ಯಾವುದೇ ಜನಾಂಗವಾದರೂ ಅರ್ಥೈಸಿಕೊಳ್ಳಬಹುದು. ಪರಂಪರಾಗತವಾಗಿ ಬಂದಿರುವ ಜಾನಪದ ಬದುಕಿನ ಅನೇಕ ವಿಷಯಗಳು ಶಿಷ್ಟ ಮಾಧ್ಯಮಗಳಿಗೆ ಮೂಲ ಹೂರಣವಾಗಿರುವಾಗ, ಜಾನಪದಕ್ಕೆ ಶಿಷ್ಟ ಮಾಧ್ಯಮಗಳು ಅನುಸರಿಸುವ ಸಂದರ್ಭ ತುಂಬಾ ಕಡಿಮೆ. ಮಾತು, ಕ್ರಿಯೆ, ಸಂಜ್ಞೆ, ಬದುಕಿನ ಎಲ್ಲಾ ಚಟುವಟಿಕೆಗಳಗೂ ಈ ಆಕರಗಳ ಮೂಲವೇ ಸಂವಾಹನಗೊಳ್ಳುತ್ತದೆ. ಕಾಲ, ದೇಶ. ಪರಿಸರಕ್ಕೆ ತಕ್ಕಂತೆ ವ್ಯಕ್ತಿಯಿಂದ ವ್ಯಕ್ತಿಗೂ ಸಮಾಜದಿಂದ ಸಮಾಜಕ್ಕೂ ಈ ಆಕರಗಳಲ್ಲಿ ಮಾರ್ಪಟು ಕಾಣಿಸುವುದುಂಟು. ಜಾನಪದ ವ್ಯಷ್ಠಿ ನಿಷ್ಠವಾದರೂಅದರ ಅನೇಕ ವಿಷಯಗಳು ಸಮಷ್ಟಿಯಾಗಿ ಮುಂದುವರಿದುಕೊಂಡು ಹೋಗುತ್ತವೆ. ಹೀಗೆ ಒಟ್ಟಾರೆ ಜಾನಪದ ಸಂಸ್ಕೃತಿಯ ಸಂವಾಹನ ಕ್ರೀಯೆ ನಿರಂತರವಾಗಿ ನಡೆಯುತ್ತಿದ್ದು, ಜನಕೋಟಿಯ ಆಶೋತ್ತರಗಳಿಗೆ ತಕ್ಕಂತೆ ನಾನಾ ರೀತಿಯ ವಿಶಿಷ್ಟ ಜಾನಪದ ಮಾಧ್ಯಮಗಳಿಗೂ ಹೊಳಹುದೋರುವುದುಂಟು.

ಜಾನಪದ ಸಾಹಿತ್ಯಗಲ ಪ್ರಕಾರಗಳಾದ ಗೀತೆ ಕಥೆ, ಗಾದೆ ಮತ್ತು ಒಗಟು ಪ್ರದರ್ಶನದ ಕಲೆಗಳಾದ ಯಕ್ಷಗಾನ, ದೊಡ್ಡಾಟ, ಕ್ರಿಷ್ಣ ಪಾರಿಜಾತ, ರಾಧನಾಟ, ಗೊಂಬೆಯಾಟ, ವೃತ್ತಿ ಕಲೆಗಳಾದ ಡೊಳ್ಳು, ಕರಡಿಮಜಲು, ಕೋಲಾಟ ಧಾರ್ಮಿಕ ಕಲೆಗಳಾದ ಪುರವಂತಿಕೆ, ಸೋಮನ ಕುಣಿತ ಇತ್ಯಾದಿಗಳ ತಂತ್ರ-ವೇಷಗಾರಿಕೆ, ಬಣ್ಣಗಾರಿಕೆ ಮುಂತಾದ ವೈಶಿಷ್ಟ್ಯಗಳನ್ನು ಶಿಷ್ಟ ಮಾಧ್ಯಮಗಳು ಸಾಕಷ್ಟು ಜಾಣ್ಮೆಯಿಂದ ಅರ್ಥಪೂರ್ಣವಾಗಿ ಬಳಸಿಕೊಂಡು ನಿಯೋಜಿತ ವಿಚಾರವನ್ನು ತಿಳಿಸುವುದಲ್ಲದೆ, ಒಂದು ರೀತಿಯ ಪರಂಪರಾಗತ ಸಂಸ್ಕೃತಿಯ ಸಂವರ್ಧನೆಯನ್ನು ಮಾಡುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಅದಲ್ಲದೆ ಕ್ರಿಯಾತ್ಮಕ ಕಲೆಗಳನ್ನು ಬಳಸಿಕೊಂಡು-ಸಾಮೂಹಿಕವಾಗಿ ಆಚರಿಸುವ ಹಬ್ಬ-ಹರಿದಿನ, ಮೋಜು-ಮಜಲು, ಉತ್ಸವಗಳನ್ನು ಅವು ತಮ್ಮ ಮಾಧ್ಯಮಗಳಲ್ಲಿ ಅಳವಡಿಸಿಕೊಂಡಿವೆ. ಆ ಮೂಲಕ ಜನಾಂಗದ ನಂಬಿಕೆ, ಆಚರಣೆ, ಸಂಪ್ರದಾಯ ವಿಧಿ-ನಿಷಿದ್ಧಗಳನ್ನು, ಮೂಡ ನಂಬಿಕೆಗಳನ್ನು ಹಾಗೂ ಶಕುನಿ,ಕಟಕಿ,ವ್ಯಂಗ್ಯ,ಬೈಗುಳ, ಆಟ-ಪಾಠ ವಿನೋಧ ಸಾಮಾಗ್ರಿಗಳನ್ನು ಬಲಸಿಕೊಂಡು ಪ್ರಭಾವಶಾಲಿ ಮಾಧ್ಯಮವಾಗಿರುವುದನ್ನು ಯಾರಾದರು ಗಮನಿಸಬಹುದಾಗಿದೆ. ಆದರೆ ಜಾನಪದ ಸಮೂಹ ಸಂವಹನ ಮಾಧ್ಯಮಗಳನ್ನು ಆಧುನಿಕ ಸಮೂಹ ಮಾಧ್ಯಮಗಳಲ್ಲಿ ಸಮರ್ಥಕವಾಗಿ ಅಳವಡಿಸಿಕೊಳ್ಳುವುದು ಅಷ್ಟೇನು ಸುಲಭದ ಕೆಲಸವಲ್ಲ. ಮತ್ತು ಎಷ್ಟರ ಮಟ್ಟಿಗೆ ಜಾನಪದ ಮಾಧ್ಯಮಗಳು ಆಧುನಿಕ ಮಾಧ್ಯಮಗಳಿಗೆ ಹೊಂದಿಕೊಳ್ಳುತ್ತವೆ ಎಂಬುದೂ ಕೂಡ ವಿಚಾರಾರ್ಹ ಸಂಗತಿಯಾಗಿದೆ. ‘ಸಂಗ್ಯಾ-ಬಾಳ್ಯಾ’ ಎಂಬ ಸಾಮಾಜಿಕ ಸಣ್ಣಾಟವನ್ನು ಆಧುನಿಕ ರೀತಿಯಲ್ಲಿ ಪ್ರಯೋಗ ಮಾಡಿದಾಗ ಆಗುವ ಅನೌಚಿತ್ಯವನ್ನು, ರಸಭಾಸವನ್ನು ವಿದ್ವಾಂಸರು ಮನಗಂಡಿದ್ದಾರೆ. ಜಾನಪದೀಯವಾದ, ಔಚಿತ್ಯ ಪೂರ್ಣವಾದ ಮಹತ್ವದ ಅಂಶಗಳನ್ನು ಉಳಿಸಿಕೊಂಡಾಗ ಮಾತ್ರ ಅಂತ ಪ್ರಯೋಗಗಳು ಸಫಲಗೊಳ್ಳುತ್ತವೆ. ಪರಿಪೂರಕ ಪ್ರಸಾರದಲ್ಲಿ ಸಾಗುತ್ತದೆ. ಆದರೆ ಈ ಸಾಂಸ್ಕೃತಿಕ ವರ್ಗವಣೆಯಿಂದ ಮಿಶ್ರ ಸಂಸ್ಕೃತಿಯೊಂದು ರೂಪುಗೊಳ್ಳುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಜಾನಪದ ಮಾಧ್ಯಮಗಳಿಂದ ಆಧುನಿಕ ಸಮೂಹ ಮಾಧ್ಯಮಗಳಿಗಾದ ಪ್ರಯೋಗಗಳು ಹೀಗಿವೆ

1. ಪರಂಪರಗತವಾದ ಜಾನಪದ ಮಾಧ್ಯಮವು ಜನತೆಯೊಂದಿಗೆ ನಿಕಟ ಸಂಪರ್ಕ ಪಡೆದಿದ್ದು ಅವರ ವೈಚಾರಿಕತೆಗಿಂತ ಅವರ ಭವ ಪರವಶತೆಯನ್ನು ಅವು ಸೆಳೆಯುತ್ತವೆ.
2. ಅವು ಸ್ಥಳಿಯವಾಗಿ ಜೀವಂತವಾಗಿದ್ದು ನೇರವಾಗಿ ಪ್ರೇಕ್ಷಕರನ್ನು ತಟ್ಟುತ್ತದೆ.
3. ಅವು ಸರಳ ಸರಾಗವಾಗಿ ನಿರೂಪಿತವಾಗಿದ್ದು ಎಲ್ಲರಿಗೂ ಅರ್ಥವಾಗುತ್ತವೆ.
4. ಅವು ಹೊಸ ವಸ್ತುಗಳಿಗೆ ಹೊಂದಿಕೊಳ್ಳುವ ಸ್ಥಿತಿ ಸ್ಥಾಪಕತ್ವ ಗುಣ ಹೊಂದಿರುತ್ತವೆ.
5. ಅವು ಎಲ್ಲಾ ವಯೋಮಾನದವರೆಗೂ ಒಪ್ಪಿತವಾಗುವ ಮನರಂಜನೆಯ ಸಾಧನೆಗಳಾಗಿರುತ್ತವೆ.
6. ಸುಶಿಕ್ಷಿತ ವರ್ಗದ ಮಾಧ್ಯಮಗಳಿಗೆ ಹೊಂದಿಸಿದಾಗ ಅವು ಕೆಳವರ್ಗದ ಮಾಧ್ಯಮಗಳೆಂದು ಅನಿಸುತ್ತವೆ.
7. ಡಾ. ಶ್ಯಾಮ್ ಪರಮಾರ ಅವರ ಮೇಲಿನ ವಿಚಾರಗಳು ಜಾನಪದ ಮತ್ತು ಸಮೂಹ ಮಾಧ್ಯಮಗಳ

ಅಧ್ಯಯನದ ವಿಧಾನ: ಭಾರತದಲ್ಲಿ ಜಾನಪದ ಎನ್ನುವುದು ಅನಾದಿ ಕಲದಿಂದಲೂ ಬೆಳೆದು ಬಂದಿರುವಂತಹ ಒಂದು ಮಹತ್ವ ಪೂರ್ಣವಾದ ಅಂಶವಾಗಿದೆ. ಜಾನಪದ ಕಲೆಗಳನ್ನು ಕುರಿತು ಅಧ್ಯಾಯನ ನಡೆಸಿದಂತೆ ಅದರ ಪ್ರಾಮುಖ್ಯತೆಯನ್ನು ತಿಳಿಯುತ್ತಾ ಹೋಗಬಹುದು. ಜನರಿಂದ ಜನರ ಪೀಳಿಗೆಯಿಂದ ಪೀಳಿಗೆಗೆ, ತಲೆಮಾರಿನಿಂದ ತಲೆಮರಿಗೆ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಇಂತಹ ಜಾನಪದ ಕಲೆಗಳ ಬಗೆಗಿನ ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ.ಅಧ್ಯಯನ ಮಹತ್ವ: ಜಾನಪದ ಕಲೆಯು ಇಂದು ನೆನ್ನೆಯದಲ್ಲ ಅನಾದಿಕಾಲದಿಂದಲೂ ಇದು ಭಾರತದಲ್ಲಿದೆ. ವಿಶ್ವದ ಇತರೆ ರಾಷ್ಟ್ರಗಳಲ್ಲಿ ನಾಗರೀಕತೆಯು ಹುಟ್ಟುವುದಕ್ಕಿಂತ ಮುಂಚಿತವಾಗಿಯೇ ಭಾರತದಲ್ಲಿ ಜಾನಪದ ಕಲೆಗಳ ಉಗಮವನ್ನು ಕಾಣಬಹುದಾಗಿದೆ. ಜಾನಪದ ಕಲೆಗಳು ಎಂದು ಕರೆಸಿಕೊಳ್ಳುವ ಜಾನಪದ ಗೀತೆ, ಗಾದೆ, ಒಗಟು, ನಾಟಕ, ನೃತ್ಯ, ಸಂಗೀತ ಮುಂತಾದವುಗಳು ಭಾರತದಲ್ಲಿ ಕಾಣಬಹುದು. ಜಾನಪದದ ಇತಿಹಾಸವನ್ನು ಗಮನಿಸಿದಾಗ ಅನೇಕ ವಿದ್ವಾಂಸರು ಜಾನಪದ ಕಲೆಗಳ ಉಳಿವಿಗಾಗಿ ದುಡಿದ್ದಿದ್ದಾರೆ. ಅಧ್ಯಯನಗಳನ್ನು ನಡೆಸಿದ್ದಾರೆ. ಅಂತಹ ವಿದ್ವಾಂಸರುಗಳೆಂದರೆ ಮ್ಯಾಕ್ಸ್ ಮುಲ್ಲರ್, ಥಿಯಯೇಡರ್ ಬನ್ಫೆ, ಆಂಡ್ರ್ಯೂ ಲಾಂಗ್, ಕರ್ನಲ್ ಟಾಡ್, ಅಬ್ಬೆ ದುಭೋಯಸ್, ಜೆ ಜಾಕಬ್, ಶ್ರೀ ಮಹೇಶಚಂದ್ರದತ್ತ, ಶ್ರೀನಟೇಶಶಾಸ್ತ್ರಿ, ಶ್ರೀ ರಾಮಸ್ವಾಮಿರಾಜು, ಬೇಂದ್ರೆ, ಮಾಸ್ತಿ, ಕಾಪಸೇರೇವಪ್ಪ, ಬೆಟಗೇರಿ, ಮದುರಚೆನ್ನ, ಹಾ.ಮಾ ನಾಯಕ, ದೇ.ಜಗೌ, ಜೀಶಂಪ ಮೊದಲಾದವರನ್ನು ಕಾಣಬಹುದು.

ಜಾನಪದ ಕಲೆಗಳು ಕೆಲವು ಪೀಳಿಗೆಯಿಂದ ಪೀಳಿಗೆಗೆ ಉಳಿದುಕೊಂಡು ಬಂದಿದ್ದರೂ ಕೂಡ ಇಂದು ಎಷ್ಟೋ ಕಲೆಗಳು ಅಳಿವಿನಂಚಿನಲ್ಲಿವೆ ಕೆಲವು ಅಳಿದು ಹೋಗಿವೆ. ಅದಕ್ಕೆ ಕಾರಣವೆಂದರೆ ಇಂದಿನ ಆಧುನಿಕ ಮಾಧ್ಯಮಗಳ ಪ್ರಭಾವವೇ ಆಗಿದೆ. ಪ್ರಸ್ತುತ ಜನತೆ ಅದರಲ್ಲೂ ಹೆಚ್ಚಚಿನದಾಗಿ ಯುವಕರು ಜಾನಪದ ಕಲೆಗಳ ಕಡೆ ತಮ್ಮ ಆಸಕ್ತಿಯನ್ನು ಆಧುನಿಕ ಮಾಧ್ಯಮಗಳು ಕಡೆ ತಮ್ಮ ಗಮನವನ್ನು ಹರಿಸುವುದೆ ಆಗಿದೆ.

ಸಾಮಾನ್ಯ ಉದ್ದೇಶ: ಪ್ರಸ್ತುತ ಆಧುನಿಕ ಮಾಧ್ಯಮಗಳಿಂದಾಗಿ ಇಂದಿನ ಯುವ ಜನರಲ್ಲಿ ಜಾನಪದ ಕಲೆಗಳ ಬಗ್ಗೆ ಆಸಕ್ತಿ ಎಂಬುದರ ಕುರಿತು ಇಂದು ಕಿರು ಸಮಶೋದನರಯನ್ನು ನಡೆಸಲಾಗಿದೆ.

ನಿರ್ದಿಷ್ಟ ಉದ್ದೇಶ: ಇಂದು ಆಧುನಿಕ ಮಾಧ್ಯಮಗಳು ಎಷ್ಟರ ಮಟ್ಟಿಗೆ ಪ್ರಭಾವವನ್ನು ಬೀರುತ್ತಿವೆ ಎಂದರೆ ಯುವಕರಲ್ಲಿ ಜಾನಪದ ಕಲೆಗಳ ಆಸಕ್ತಿ ಕಡಿಮೆಯಾಗಿದ್ದು ಅನೇಕ ಜಾನಪದ ಕಲೆಗಳು ನಶಿಸುತ್ತಿವೆ. ಇವುಗಳ ಕುರಿತು ಅಧ್ಯಯನ ನಡೆಸುತ್ತಿದ್ದು ಅವುಗಳ ನಿರ್ಧಿಷ್ಟ ಉದ್ದೇಶಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

- ಯುವಕರಲ್ಲಿ ಜಾನಪದ ಕಲೆಗಳ ಬಗ್ಗೆ ಅರಿವಿದೆಯ ಎಂಬುದನ್ನ ತಿಳಿಯುವುದು.
- ಯುವಕರಲ್ಲಿ ಆಧುನಿಕ ಮಾಧ್ಯಮಗಳು ನಕಾರಾತ್ಮಕ ಪ್ರಭಾವ ಬಿರುತ್ತಿವೆಯೇ ಎಂಬುದನ್ನ ತಿಳಿಯುವುದು.
- ಇಂದಿನ ಜಾನಪದ ಕಲಾವಿದರ ಪರಿಸ್ಥಿತಿ ಯಾವ ರೀತಿಯಲ್ಲಿದೆ ಎಂಬುದನ್ನ ತಿಳಿಯುವಂತಹದ್ದು
- ಜಾನಪದ ಕಲೆಗಳ ಪ್ರಭಾವದಿಂದ ಯುವಕರ ಜೀವನ ಶೈಲಿಯ ಮೇಲೆ ಪ್ರಭಾವವನ್ನ ಬೀರಿದೆಯೇ ಎಂಬುದನ್ನ ತಿಳಿಯುವಂತಹದ್ದು.

3.4 ಪ್ರಾಕಲ್ಪನೆಗಳು :

- ಜಾನಪದ ಕಲೆಗಳ ಬಗ್ಗೆ ನಿಮಗೆ ಅರಿವಿದೆಯೇ?
- ಜಾನಪದ ಕಲೆಗಳ ಪ್ರಭಾವದಿಂದ ನಿಮ್ಮ ಜೀವನ ಶೈಲಿಯ ಮೇಲೆ ಪ್ರಭಾವ ಬೀರಿದೆಯೇ?
- ಆಧುನಿಕ ಮಾಧ್ಯಮಗಳು ಜಾನಪದ ಕಲೆಗಳ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತಿವೆಯೇ?
- ಪ್ರಸ್ತುತ ಜಾನಪದ ಕಲಾವಿದರ ಪರಿಸ್ಥಿತಿ ಯಾವ ರೀತಿಯಲ್ಲಿದೆ?

ಅಧ್ಯಯನದ ಕ್ಷೇತ್ರ: ಪ್ರಸ್ತುತ ದಿನಗಳಲ್ಲಿ ಆಧುನಿಕ ಮಾಧ್ಯಮಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತಿವೆ. ಇದರಿಂದಾಗಿ ಯುವ ಜನತೆಯು ಆಧುನಿಕ ಮಾಧ್ಯಮಗಳ ಪ್ರಭಾವಕ್ಕೊಳಗಾಗಿ ಜಾನಪದ ಕಲೆಗಳನ್ನು ನಿರ್ಲಕ್ಷ ಮಾಡುತ್ತಿದ್ದಾರೆ ಎಂಬುದರ ಕುರಿತು ನನ್ನ ಸಂಶೋದನಾ ಸ್ವ ಪ್ರಭಂದಕ್ಕಾಗಿ ಹರಿಹರ ತಾಲ್ಲೂಕಿನ ಬನ್ನಿಕೋಡು, ಬೆಳ್ಳೂಡಿ, ಸಲಗನಹಳ್ಳಿ, ಕೆ.ಬೇವಿನಹಳ್ಳಿ ಗ್ರಾಮಗಳನ್ನು ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ಅಧ್ಯಯನ ಕ್ಷೇತ್ರಗಳಾಗಿ ಆಯ್ಕೆ ಮಾಡಿಕೊಂಡಿರುತ್ತೇನೆ.

ಅಧ್ಯಯನದ ಮಿತಿ: ಅಧ್ಯಯನ ಕ್ಷೇತ್ರವು ಹರಿಹರ ತಾಲ್ಲೂಕಿನ ಐದು ಗ್ರಾಮಗಳಿಗೆ ಸೀಮಿತವಾಗಿರುವುದರಿಂದ ಆಧುನಿಕ ಮಾಧ್ಯಮಗಳ ಪ್ರಭಾವದಿಂದ ಯುವಕರಲ್ಲಿ ಜಾನಪದ ಕಲೆಗಳ ಆಸಕ್ತಿ ಕಡಿಮೆಯಾಗುತ್ತಿದೆಯೆಂದು ಒಟ್ಟುಗೂಡಿಸಿ ಹೇಳಲು ಸಾಧ್ಯವಿಲ್ಲ. ಹಾಗೂ 18 ವರ್ಷದಿಂದ 35 ವರ್ಷದೊಳಗಿನ ವಯಸ್ಸಿನ ಮಿತಿಯೊಳಗಿರುವವರನ್ನು ಸಂರ್ದಶಿಸಿ ಮಾಹಿತಿ ಕಲೆಹಾಕಲಾಗುತ್ತದೆ.

ನಮೂನೆ: ಆಧುನಿಕ ಮಾಧ್ಯಮಗಳ ಪ್ರಭಾವದಿಂದ ಹರಿಹರ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಯುವಕರಲ್ಲಿ ಜಾನಪದ ಕಲೆಗಳ ಆಸಕ್ತಿ ಕಡಿಮೆಯಾಗುತ್ತಿದ್ದು ಅವುಗಳ ಅಳಿವಿಗೆ ಹಿರಿಯರ ನಿರ್ಲಕ್ಷವೂ ಕಾರಣವಾಗಿದೆ ಎಂಬುದರ ಸತ್ಯಾಂಶ ಸಂಶೋದನೆಗಾಗಿ ಪ್ರಶ್ನಾವಳಿಯ ಮೂಲಕ ಮಾಹಿತಿಯನ್ನು ಕಲೆ ಹಾಕಲಾಗಿದೆ.ಸಂದರ್ಶಿಸುವ ಮಾಹಿತಿಯನ್ನು ಕುರಿತ ಕೊಷ್ಟಕದ, ಮಾಹಿತಿ ಕೆಳಗಿನಂತಿದೆ ಸಮೀಕ್ಷಾ ವಿದಾನದಡಿಯಲ್ಲಿ ಪ್ರಶ್ನಾವಳಿಗಳ ನಮೂನೆ ಮೂಲಕ ಸಂಶೋದನೆ ನಡೆಸಲಾಗಿದೆ.ಗ್ರಾಮಗಳ ಹೆಸರು:ಬನ್ನಿಕೋಡು–20,ಬೆಳ್ಳೂಡಿ–20,ಸಲಗನಹಳ್ಳಿ–20,ಕೆ.ಬೇವಿನಹಳ್ಳಿ–20

ಸಂಶೋದನೆಗಾಗಿ ನಾಲ್ಕು ಹಳ್ಳಿಗಳನ್ನು ತೆಗೆದುಕೊಳ್ಳಲಾಗಿದದ್ದು ಪ್ರತಿಯೊಂದು ಹಳ್ಳಿಯಲ್ಲಿ 20 ಜನರಂತೆ 80 ಜನರನ್ನು ಪ್ರಶ್ನಾವಳಿಯ ಮೂಲಕ ಸಂದರ್ಶನ ಮಾಡಲಾಗಿದೆ.

ದತ್ತಾಂಶ ವಿಶ್ಲೇಷಣೆ: ಇಂದಿನ ಆಧುನಿಕ ಯುಗದಲ್ಲಿ ಜಾನಪದ ಕಲೆಗಳು ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಿದ್ದು ಇಂದಿನ ಯುವ ಜನತೆ ಆಧುನಿಕ ಮಾಧ್ಯಮದೆಡೆಗೆ ತಮ್ಮ ಒಲವನ್ನು ತೋರುತ್ತಿದ್ದಾರೆ. ಹಾಗೂ ಜಾನಪದ ಕಲೆಗಳು ಸಶಿಸುತ್ತಿರುವುದಕ್ಕೆ ಹಿರಿಯರ ನಿರ್ಲಕ್ಷವು ಕಾರಣ ಎಂಬುದರ ಕುರಿತಾಗಿ ಹರಿಹರ ತಾಲೂಕಿನ ಸಮಗ್ರ ಅಧ್ಯಯನವನ್ನು ಪ್ರಶ್ನಾವಳಿಗಳ ಮೂಲಕ ಸಂದರ್ಶಿಸಿದ ಮಾಹಿತಿಯನ್ನು ಇಲ್ಲಿ ಕಾಣಬಹುದಾಗಿದ್ದು, ನನ್ನ ಈ ಸಂಶೋದನಾ ಪ್ರಮಂಧಕ್ಕೆ ಹರಿಹರ ತಾಲೂಕಿನ ಬನ್ನಿಕೋಡು, ಬೆಳ್ಳೂಡಿ, ಕೆ.ಬೇವಿನಹಳ್ಳಿ, ಹಾಗೂ ಸಲಗನಹಳ್ಳಿ ಗ್ರಾಮಗಳನ್ನು ಸಂಶೋದನಾ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡಿದ್ದು 18 ರಿಂದ 35 ವರ್ಷದೊಳಗಿನ 80 ಜನರನ್ನು ಸಂದರ್ಶಿಸಿ ಮಾಹಿತಿಯನ್ನ ಸಂಗ್ರಹಿಸಲಾಗಿದೆ. ಹಾಗೂ ಬಂದಿರುವ ಪಲಿತಾಂಶವನ್ನು ಹರಿಹರ ತಾಲೂಕಿನ ಗ್ರಾಮಗಳ ಜನರ ಸ್ವ ಅಭಿಪ್ರಾಯವಾಗಿದ್ದು ಸಕಾರಾತ್ಮಕವಾದ ಮತ್ತು ನಕಾರಾತ್ಮಕವಾದ ಉತ್ತರಗಳಾಗಿರುತ್ತವೆ.

ಭಾರತ ಮಟ್ಟಿಗೆ ಹೇಳುವುದಾದರೆ ಭಾರತ ಜಾನಪದ ಕಲೆಗಳು ತವರು ಎಂದೇ ಕರೆಯಬಹುದು. ವಿಶ್ವದಲ್ಲಿ ನಾಗರೀಕತೆ ಉಗಮದ ಮುನ್ನವೇ ಇಲ್ಲಿ ಜಾನಪದ ಕಲೆಗಳ ಉಗಮವಾಗಿತ್ತು. ಅಂದರೆ, ಜಾನಪದ ಕಲೆ ಎಷ್ಟಟು ಪುರಾತನವಾದದ್ದು ಎಂದು ನಾವು ಗಮನಿಸಬಹುದು. ಜಾನಪದ ಹಾಡು, ನಾಟಕ, ಕಲೆ, ಸಂಗೀತ, ಶಿಲ್ಪಕಲೆ, ಚಿತ್ರಕಲೆ, ಇನ್ನು ಎಷ್ಟೋ ರೀತಿಯ ಜಾನಪದ ಕಲೆಗಳು ಇಂದಿನ ಯುಗದಲ್ಲಿ ನಶಿಸುತ್ತಿವೆ. ಹಾಗೂ ಅಳಿವಿನಂಚಿನಲ್ಲಿದೆ.

ಮಾಧ್ಯಮಗಳ ನಾಗಲೋಟದಲ್ಲಿ ವಿಶ್ವವೇ ಒಂದು ಹಳ್ಳಿಯಾಗಿತ್ತಿದೆ. ಜಗತ್ತಿನ ಒಂದು ಮೂಲೆಯಿಂದ ಮತ್ತೊಂದು ಮೂಲೆಯನ್ನು ಕ್ಷಣಮಾತ್ರದಲ್ಲಿ ಸಂಪರ್ಕಿಸುವ, ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಮತ್ತೆಲ್ಲಿಗೋ, ಮಾಹಿತಿಯನ್ನ ರವಾನಿಸುವ, ಯಾವುದೋ ದೇಶದ ವೈದ್ಯ ಅಲ್ಲಿಯೇ ಕುಳಿತು ಭಾರತದ ನಗರವೊಂದು ನಡೆಯುವ ಶಸ್ತ್ರಚಿಕಿತ್ಸೆಗೆ ಮಾರ್ಗದರ್ಶನ ನೀಡುವ ಇದರಲ್ಲಿಯೇ ಇದ್ದು ಗೋಳದ ಮೇಲೋಂದು ಸುತ್ತು ಬರುವ ಎಲ್ಲಾ ಸಾಧ್ಯತೆಗಳನ್ನು ಹೊಸ ಮಾಧ್ಯಮಗಳು ಮಾಡುತ್ತಿವೆ. ಇನ್ನು ಸ್ಯಾಟಲೈಟ್ ಚಾನೆಲ್‌ಗಳು, ವಿದೇಶಿ ಪತ್ರಿಕೆಗಳು, ಸೈಬರ್ ಲೋಕ ಅದರಲ್ಲಿಯೂ ಅಂತರ್ಜಾಲದ ಬಳಕೆಯೂ ಹೆಚ್ಚುತ್ತಿರುವುದು ಜಾನಪದ ಕಲೆಗಳು ನಶಿಸುತ್ತಿರುವುದಕ್ಕೆ ಕಾರಣವಾಗಿವೆ. ಇಂದು ಎಷ್ಟೋ ಹಳೆಯ ರೀತಿಯ ಜಾಪಪದ ಕಲೆಗಳು ಆಧುನಿಕತೆಗೆ ತಕ್ಕಂತೆ ಬದಲಾವಣೆ ಕಾಣುತ್ತಿದೆ, ಇನ್ನು ಕೆಲ ಜಾನಪದ ಕಲೆಗಳು ನಶಿಸುತ್ತಲಿವೆ. ನಾಟಕ, ಸಂಗೀತ, ನೃತ್ಯಗಳು ಮುಂತಾದವುಗಳಲ್ಲಿ ಆಧಿನಿಕತೆಯ ಸ್ವಬಗನ್ನು ನಾವು ಕಾಣಬಹುದು. ಅಷ್ಟೇ ಅಲ್ಲದೇ ಜಾನಪದ ಕಥೆಗಳು, ಗೀಗಿ ಪದಗಳು, ಒಗಟುಗಳು, ಕೋಲಾಟ ಕಂಸಾಳೆ, ದೊಡ್ಡಾಟ, ಯಕ್ಷಗಾನದಂತಹ ಎಷ್ಟೋ ಕಲೆಗಳುಅಳಿವಿನ ಅಂಚಿಗೆ ತಲುಪಿದ್ದು ಹಾಗೆಯೇ ಬಿಟ್ಟರೆ ಇನ್ನು ಕೆಲವೇ ದಿನಗಳಲ್ಲಿ ಈಕಲೆಗಳೆಲದಲಾ ನಶಿಸಿ ಹೋಗುವ ಪರಿಸ್ಥಿತಿ ಎದುರಾಗಬಹುದು. ಹಾಗೂ ಮುಂದಿನ ಪೀಳಿಗೆಯವರು ಜಾನಪದ ಕಲೆಗಳನ್ನು ಪುಸ್ತಕದಲ್ಲಿ ಓದಿ ತಿಳಿಯಬಹುದೇ ಹೊರತು ಅವುಗಳನ್ನು ಪ್ರತ್ಯಕ್ಷವಾಗಿ ಕಾಣಲು ಸಾಧ್ಯವಿಲ್ಲ.

ಆಧುನಿಕ ಮಾಧ್ಯಮಗಳಾದ ಟಿ.ವಿ ಅಂತರ್ಜಾಲ ಮಾಧ್ಯಮಗಳಾದ ಸಾಮಾಜಿಕ ಜಾಲತಾಣಗಳು ಯುವ ಜನತೆಗಳನ್ನು ಆಕರ್ಶಿಸಿ ತನ್ನತ್ತ ಸೆಳೆದುಕೊಂಡು ಹಿಡಿದಿಟ್ಟುಕೊಂಡಿದೆ. ದಿನದ 24 ಗಂಟೆಗಳಲ್ಲಿ ಹೆಚ್ಚು ಸಮಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ಕಳೆಯುತ್ತಿರುವುದೂ ಕೂಡ ಜಾನಪದ ಕಲೆಗಳು ನಶಿಸುತ್ತಿರುವುದಕ್ಕೆ ಕಾರಣವಾಗಿದೆ. ಅಷ್ಟೇ ಅಲ್ಲದೆ ಪಾಶ್ಚಿಮಾತ್ಯ ಸಂಸ್ಕೃತಿಯೂ ಕೂಡ ತನ್ನ ಪ್ರಭಾವವನ್ನು ಬೀರುತ್ತಿವೆ. ಆಧುನಿಕಥೆಯ ಪ್ರಭಾವದಿಂದ ಜಾನಪದ ಹಾಡುಗಳ ಬದಲಾಗಿ ಪಾಶ್ಚಿಮಾತ್ಯ ಸಂಗೀತ,ಸಿನಿಮ ಹಡುಗಳ ಮತ್ತು ಪಾಪ್ ಸಂಗೀತಗಳನ್ನು ಕಲಿಯುತ್ತಿದ್ದಾರೆ. ಜಾನಪದ ನೃತ್ಯಗಳು ಬದಲಿಗೆ ಪಾಶ್ಚಿಮಾತ್ಯ ನೃತ್ಯಗಳತ್ತ ಹೆಚ್ಚು ಒಲವು ಹೊಂದಿರುವುದೂ ಕೂಡ ಜಾನಪದ ಕಲೆಗಳು ನಶಿಸುತ್ತಿರುವುದಕ್ಕೆ ಕಾಎಣವಾಗಿದೆ.

ಜಾನಪದ ಕಲೆಗಳು ಇಷ್ಟು ದಿನಗಳ ಕಾಲ ಕೇವಲ ನಗರ ಪ್ರದೇಶಗಳಲ್ಲಷ್ಟೇ ನಾಶವಾಗುತ್ತಿದ್ದವೂ. ಆದರೆ ಇಂದು ಅವುಗಳು ಗ್ರಾಮೀಣ ಪ್ರದೇಶಲ್ಲಿಯೂ ನಾಶವಾಗುತ್ತಿವೆ. ಮರಕೋತಿ,ಕಬ್ಬಡಿ,ಖೋ–ಖೋ, ಬಜನೆ ಪದಗಳು, ಗೀಗೀ ಪದಗಳು, ಲಗೋರಿಯಂತಹ ಎಷ್ಟೋ ಕಲಗಳಿಗೆ ಬದಲಾಗಿ ಕ್ರಿಕೇಟ್ ಹಾಕಿ, ಪಾಪ್ ಗೀತೆಗಳು ಬಂದಿವೆ. ಇವುಗಳ ಬದಲಾವಣೆಗೆ ಆಧುನಿಕ

ಮಾಧ್ಯಮಗಳಷ್ಟೆ ಕಾರಣವಾಗಿಲ್ಲ ಇಂದಿನ ಜನರ ಮನಸ್ಥಿತಿಯು ಒಂದು ಕಾರಣವಾಗಿದೆ.ಇಂದಿನ ಆಧುನಿಕ ಯುಗದಲ್ಲಿ ಹಿರಿಯರು ಕೂಡ ಜಾನಪದ ಕಲೆಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದು ತಮ್ಮ ಮಕ್ಕಳಿಗೆ ಕಲಿಸಲು ಹಿಂಜರಿಯುತ್ತಿದ್ದಾರೆ. ಕಾರಣ ಇಂದಿನ ಆಧುನಿಕತೆ. ಈ ಆಧುನಿಕತೆಯ ಕಾರಣದಿಂದ ಜಾನಪದ ಕಲೆಗಳಿಗೆ ಬೆಲೆಯಿಲ್ಲದಂತಾಗಿದ್ದು ಕಲಾವಿದರ ಬೆಳವಣಿಗೆಯು ಕಷ್ಟವಾಗಿದೆ. ಆದ್ದರಿಂದ ಜಾನಪದ ಕಲೆಗಳನ್ನು ಬಿಟ್ಟು ಆಧುನಿಕತೆ ಕಡೆಗೆ ತಮ್ಮ ಮುಖವನ್ನು ಬದಲಿಸಿರುವುದು ವಿಶಾದನಿಯ ಸಂಗತಿಯಾಗಿದೆ. ಜಾನಪದ ತವರು ಎಂದು ಕರೆಸಿಕೊಳ್ಳುವ ಭಾರತದಲ್ಲಿ ಇಂದು ಜಾನಪದ ಕಲೆಗಳನ್ನು ಕಲಿಸುವುದಕ್ಕೆ ಜಾನಪದ ವಿಶ್ವ ವಿದ್ಯಾಲಯಗಳನ್ನು ಸ್ಥಾಪನೆಯಾಗುತ್ತಿವೆ ಎಂದರೆ ಜಾನಪದ ಎಷ್ಟರ ಮಟ್ಟಿಗೆ ತನ್ನ ಸ್ಥಾನ ಮಾನವನ್ನು ಕಳೆದುಕೊಂಡಿದೆ ಎಂಬುದನ್ನು ಗಮನಿಸಬಹುದು. ಆದರೂ ಇಂದು ಜಾನಪದ ಕಲೆಗಳಲ್ಲಿ ಆಸಕ್ತಿ ಹೊಂದಿರುವ ಕೆಲವರು ಇವುಗಳ ಉಳಿವಿಗಾಗಿ ಸಂಘ ಸಂಸ್ಥೆಗಳನ್ನು ಸ್ತಾಪಿಸಿಕೊಂಡು ಶ್ರಮಿಸುತ್ತಿದ್ದಾರೆ. ಸರ್ಕಾರವೂ ಕೂಡ ಜಾನಪದ ಉಳಿವಿಗಾಗಿ ಅನೇಕ ಕ್ರಮಗಳನ್ನು ಕೈಗೂಂಡಿದೆ. ಆದರೂ ಆಧುನಿಕ ಮಾಧ್ಯಮಗಳು ಪಾಶ್ಚಿಮಾತ್ಯ ಕಲೆಗಳು ಸ್ಥಳೀಯ ಜಾನಪದ ಕಲೆಯನ್ನು ನಾಶಹೊಂದುವಂತೆ ಮಾಡುತ್ತವೆ.

**1. ಜಾನಪದ ಕಲೆಗಳ ಬಗ್ಗೆ ನಿಮಗೆ ಅರಿವಿದೆಯೇ?**

ಇಂದಿನ ದಿನಮಾನಗಳಲ್ಲಿ ಯುವಕರು ಆಧುನಿಕ ಮಾಧ್ಯಮಗಳಾದ ವಾಟ್ಸಾಪ್, ಫೇಸ್ಬುಕ್, ಯುಟ್ಯೂಬ್ ಟ್ವಿಟರ್ ಬಳಕೆಯನ್ನ ಹೆಚ್ಚಾಗಿ ಮಾಡುತ್ತಿರುವುದರಿಂದ ಜಾನಪದ ಕಲೆಗಳ ಬಗ್ಗೆ ಯುವಕರಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ ಎಂಬುದು ವಿಶಾದನಿಯವಾಗಿದೆ. ಬನ್ನಿಕೋಡು ಮತ್ತು ಸಲಗನಹಳ್ಳಿ ಗ್ರಾಮದಲ್ಲಿನ 20 (100%) ರಷ್ಟು 20(100%) ರಷ್ಟು ಜನರು ಇಂದಿನ ಯುವಕರಲ್ಲಿ ಜಾನಪದ ಕಲೆಗಳಲ್ಲಿ ಕಾಳಜಿಯಿದೆಯೆಂದು ಒಪ್ಪಿರುತ್ತಾರೆ. ಅದೇರೀತಿ ಕ್ರಮವಾಗಿ ಬೆಳ್ಳೂಡಿ 14(70%) ಮತ್ತು ಕೆ.ಬೇವಿನಹಳ್ಳಿ 16(80%) ರಷ್ಟು ಜನರು ಇಂದಿನ ಯುವಕರಲ್ಲಿ ಕಾಳಜಿಯಿದೆಯೆಂದು ಹೇಳಿರುತ್ತಾರೆ. ಹಾಗೂ ಬೆಳ್ಳೂಡಿ 4% ಮತ್ತು ಕೆ.ಬೇವಿನಹಳ್ಳಿ 6% ರಷ್ಟು ಜನರು ಇಂದಿನ ಯುವಕರಲ್ಲಿ ಜಾನಪದ ಕಲೆಗಳಲ್ಲಿ ಕಾಳಜಿಯಿಲ್ಲವೆಂದು ಒಪ್ಪಿರುತ್ತಾರೆ. ಸಂಶೋದನೆಗಾಗಿ ತೆಗೆದುಕೊಂಡ ನಾಲ್ಕು ಹಳ್ಳಿಗಳಲ್ಲಿನ ಶೇ 100% ರಷ್ಟು ಜನರಲ್ಲಿ 87.5% ಜಾನಪದ ಕಲೆಗಳ ಬಗ್ಗೆ ಅರಿವಿದೆ ಎಂದಿದ್ದಾರೆ. ಅದರಂತೆ ಶೇ 12.5% ರಷ್ಟು ಯುವಕ ಜಾನಪದ ಕಲೆಗಳ ಬಗ್ಗೆ ಅರಿವಿಲ್ಲವೆಂದು ಸೂಚಿಸಲಾಗಿದೆ.ಈ ಮೇಲಿನ ದತ್ತಾಂಶಗಳನ್ನು ಗಮನಿಸಿದಾಗ ಪ್ರಸ್ತುತ ಯುವಕರಲ್ಲಿ ಜಾನಪದ ಕಲೆಗಳ ಬಗ್ಗೆ ಅರಿವಿದೆಯೆಂದು ಹೆಚ್ಚು ಜನರು ಒಪ್ಪಿಕೊಂಡಿದ್ದು ಇದು ಸತ್ಯವು ಆಗಿದೆ. ಇಂದಿನ ಆಧುನಿಕ ಮಾಧ್ಯಮಗಳ ಬಳಕೆಯಲ್ಲಿ ಹೆಚ್ಚು ತೊಡಗಿರುವುದರಿಂದ ಜಾನಪದ ಕಲೆಗಳ ಮೇಲಿನ ಆಸಕ್ತಿ ಕಡಿಮೆಯಾಗುತ್ತಿದೆ ಎಂದು ಒಪ್ಪಿಕೊಂಡಿದ್ದಾರೆ.

**2. ಜಾನಪದ ಕಲೆಗಳಪ್ರಭಾವದಿಂದ ಯುವಕರ ಜೀವನ ಶೈಲಿಯ ಮೇಲೆ ಪ್ರಭಾವ ಬಿರಿದೆಯೇ?**

ಪ್ರಸ್ತುತ ಜಾನಪದ ಕಲೆಗಳು ಯುವಕರಲ್ಲಿನ್ ಹೊಸ ಮಾಧ್ಯಮದ ಬಳಕೆಯಿಂದ ಜಾನಪದ ಕಲೆಗಳು ಎನ್ನುವಂತಹದ್ದು ನಶಿಸುತ್ತಿದ್ದು. ಎಲ್ಲಾ ಯುವಕರು ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಜಾನಪದ ಕಲೆಗಳ ಬಗ್ಗೆ ಆಸಕ್ತಿಯು ಕಡಿಮೆಯಾಗುತ್ತಿದೆ. ಜಾನಪದ ಕಲೆಗಳ ಪ್ರಭಾವ ಯುವಕರ ಜೀವನ ಶೈಲಿಯ ಮೇಲೆ ಪ್ರಭಾವ ಬೀರಿರುವುದಿಲ್ಲವೆಂದು ತಿಳುಹಿಸಲಾಗಿದೆ.ಕೆ.ಬೇವಿನಹಳ್ಳಿ ಗ್ರಾಮದಲ್ಲಿ 20(100%) ರಷ್ಟು ಜನರಲ್ಲಿ 12% ಜಾನಪದ ಕಲೆಗಳು ಜೀವನ ಶೈಲಿಯ ಮೇಲೆ ಪ್ರಭಾವ ಬೀರಿದೆ ಎಂದ್ದಿದ್ದಾರೆ. ಅದೇ ರೀತಿ ಕ್ರಮವಾಗಿ ಬೆಳ್ಳೂಡಿ 12% ಬನ್ನಿಕೊಡು 10% ಸಲಗನಹಳ್ಳಿ 12% ಕೆ.ಬೇವಿನಹಳ್ಳಿ 08% ರಷ್ಟು ಜನರು ಜಾನಪದ ಕಲೆಗಳು ಯುವಕರ ಜೀವನ ಶೈಲಿಯ ಮೇಲೆ ಪ್ರಭಾವ ಬೀರಿಲ್ಲ ಎಂದು ತಿಳಿದಿದೆ. ಸಂಶೋದನೆಗಗಿ ತೆಗೆದುಕೊಂಡ ನಾಲ್ಕು ಹಳ್ಳಿಗಳಲ್ಲಿನ ಶೇ 100% ರಷ್ಟು ಜನರಲ್ಲಿ ಶೇ47.5% ರಷ್ಟು ಜನರು ಜಾನಪದ ಕಲೆಗಳು ಯುವಕರ ಜೀವನ ಶೈಲಿಯ ಮೇಲೆ ಪ್ರಭಾವ ಬೀರಿವೆ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ಶೇ 52.5% ರಷ್ಟು ಜನರು ಜೀವನ ಶೈಲಿಯ ಮೇಲೆ ಪ್ರಭಾವ ಬೀರಿಲ್ಲ ಎಂದಿದ್ದಾರೆ.

**3. ಆಧುನಿಕ ಮಾಧ್ಯಮಗಳು ಜಾನಪದ ಕಲೆಗಳ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತಿವೆಯೇ?**

ಇಂದಿನ ಆಧುನಿಕ ಮಾಧ್ಯಮಗಳು ಯುವ ಪೀಳಿಗೆಯನ್ನು ಯಂತ್ರವನ್ನಾಗಿಸಿತ್ತಿದ್ದು ಕ್ರಿಯಾಶೀಲತೆಯನ್ನು ಕಡಿಮೆಗೊಳಿಸುತ್ತಿದೆ. ಆಧುನಿಕಕ ಮಾಧ್ಯಮಗಳು ಎಷ್ಟರ ಮಟ್ಟಿಗೆ ತನ್ನ ಪ್ರಭಾವವನ್ನು ಬೀರಿವೆಯೆಂದರೆ ಇಂದಿನ ಯುವ ಜನತೆ ದಿನದ 24 ಗಂಟೆಗಳ ಕಾಲ ಟಿ.ವಿ, ಕಂಪ್ಯೂಟರ್, ಫೇಸ್‌ಬುಕ್, ವಾಟ್ಸಪ್,ಟ್ವಿಟರ್ ನಂತಹ ಆಧುನಿಕ ಮಾಧ್ಯಮಗಳು ಯುವಕರ ಜೀವನವೆ ಹಾಳುಮಾಡಿಬಿಟ್ಟಿವೆ. ಇಂದಿನ ಯುವ ಜನರಿಗೆ ಆಧುನಿಕ ಮಾಧ್ಯಮಗಳನ್ನು ಬಳಸದೆ ಇದ್ದರೆ ತಮ್ಮ ಜೀವನವೇ ನಶ್ವರ ಎನ್ನುವಷ್ಟರ ಮಟ್ಟಿಗೆ ತಲುಪ್ಪಿದ್ದು ಜೀವನದಲ್ಲಿ ಏನಾದರೂ ತೊಂದರೆಗಳು ಬಂದರೆ ಅವುಗಳನ್ನು ಎದುರಿಸಲಾಗದೆ ಆತ್ಮಹತ್ಯೆಯ ಮೊರೆ ಹೋಗುವುದು.ಜಾನಪದ ಕಲೆಗಳಾದಂತಹ ಡೊಳ್ಳುಕುಣಿತ, ಬಜನೆ, ಪದಗಳು, ಗ್ರಾಮೀಣ ಕ್ರೀಡೆಗಳೂ ಮರೆಯಾಗುತ್ತಿದ್ದು ಸಿನಿಮಾ ಧಾರವಾಯಿಗಳು ತಮ್ಮ ಪ್ರಭಾವವನ್ನ ಹೆಚ್ಚಿಸಿಕೊಂಡಿವೆ. ಬನ್ನಕೊಡು 20(100%) ಸಲಗನಹಳ್ಳಿ 20 (100%) ಕೆ.ಬೇವಿನಹಳ್ಳಿ 20 (100%) ಗಳ ಜನರು ಶೇಕಡ ತೋರಿಸಿರುವಂತೆ ಜಾನಪದ ಕಲೆಯ ಮೇಲೆ ಆಧುನಿಕ ಮಾಧ್ಯಮಗಳು ನಕರಾತ್ಮಕ ಪರಿನಾಮವನ್ನ ಬೀರುತ್ತಿವೆ ಎಂದು ತಿಳುಹಿಸಿವೆ. ಅದೇರೀತಿ ಕ್ರಮವಾಗಿ ಬೆಳ್ಳೂಡಿ ಶೇ 6% ರಷ್ಟು ಪ್ರಭಾವ ಬೀರುತ್ತಿಲ್ಲ ಎಂದು ತಿಳುಹಿಸಿದೆ. ಒಟ್ಟಾರೆಯಗಿ ಹೇಳುವುದಾದರೆ ಶೇಕಡ 100% ರಷ್ಟು ಜನರಲ್ಲಿ 87.5% ಜನರು ಆಧುನಿಕ ಮಾಧ್ಯಮಗಳು ಜಾನಪದ ಕಲೆಗಳ ಮೇಲೆ ನಕಾರಾತ್ಮಕ ಪರಿಣಾಮವನ್ನ ಬೀರುತ್ತಿವೆ ಎಂದು ತಿಳಿಸಿದರೆ 12.5% ಜನರು ಬೀರಿಲ್ಲ ಎಂದು ತಿಳಿಸಿದ್ದಾರೆ.

**4. ಜಾನಪದ ಕಲೆಗಳು ಅಳಿವಿನಂಚಿನಲ್ಲಿರುವುದಕ್ಕೆ ಆಧುನಿಕ ಮಾಧ್ಯಮಗಳು ಕಾರಣವೇ?**

ಬನ್ನಿಕೊಡು 20(100%) ಸಲಗನಹಳ್ಳಿ 20(100%) ಕೆ.ಬೇವಿನಹಳ್ಳಿ 20(100%) ಗಳ ಜನರು ಶೇಕಡ ತೋರಿಸಿರುವಂತೆ ಜಾನಪದ ಕಲೆಗಳು ಅಳಿವಿನಂಚಿನಲ್ಲಿರುವುದಕ್ಕೆ ಆಧುನಿಕ ಮಾಧ್ಯಮಗಳು ಕಾರಣ ಎಂದು ತಿಳುಹಿಸಿವೆ. ಅದೇರೀತಿ ಕ್ರಮವಾಗಿ ಬೆಳ್ಳೂಡಿ ಶೇ 04% ರಷ್ಟು ಪ್ರಭಾವ ಬೀರತ್ತಿಲ್ಲ ಎಂದು ತಿಳುಹಿಸಿದೆ. ಒಟ್ಟಾರೆಯಾಗಿ ಹೇಳುವುದಾದರೆ ಶೇಕಡ 100% ರಷ್ಟು ಜನರಲ್ಲಿ 92.5%ರಷ್ಟು ಜನರು ಆಧುನಿಕ ಮಾಧ್ಯಮಗಳು ಜಾನಪದ ಕಲೆಗಳ ಮೇಲೆ ನಕಾರಾತ್ಮಕ ಪರಿಣಾಮವನ್ನ ಬೀರುತ್ತಿವೆ ಎಂದು ತಿಳಿಸಿದರೆ 7.5 ಜನರು ಬೀರಿಲ್ಲ ಎಂದು ತಿಳಿಸಿದ್ದಾರೆ.

**5. ಜಾನಪದ ಕಲೆಗಳು ಸಂದೇಶಗಳನ್ನು ರವಾನಿಸುವಲ್ಲಿ ಯಶಸ್ವಿಯಾಗಿವೆಯೇ?**

ಬನ್ನಿಕೊಡು 12(100%) ಸಲಗಲಹಳ್ಳಿ 18(100%) ಕೆ.ಬೇವಿನಹಳ್ಳಿ 18(100%)ಗಳ ಜನರು ಶೇಕಡ ತೋರಿಸಿರುವಂತೆ ಜಾನಪದ ಕಲೆಗಳು ಸಂದೇಶಗಳನ್ನು ರವಾನಿಸುವಲ್ಲಿ ಯಶಸ್ವಿಯಾಗಿಯೇ ಎಂದು ತಿಳುಹಿಸಿವೆ. ಅದೇರೀತಿ ಕ್ರಮವಾಗಿ ಬೆಳ್ಳೂಡಿ ಶೇ 12% ರಷ್ಟು ಪ್ರಭಾವ ಬೀರತ್ತಿಲ್ಲ ಎಂದು ತಿಳುಹಿಸಿದೆ. ಒಟ್ಟಾರೆಯಾಗಿ ಹೇಳುವುದಾದರೆ ಶೇಕಡ 100% ರಷ್ಟು ಜನರಲ್ಲಿ70%ರಷ್ಟು ಜನರು ಆಧುನಿಕ ಮಾಧ್ಯಮಗಳು ಜಾನಪದ ಕಲೆಗಳ ಮೇಲೆ ನಕಾರಾತ್ಮಕ ಪರಿಣಾಮವನ್ನ ಬೀರುತ್ತಿವೆ ಎಂದು ತಳಿಸಿದರೆ 30% ಜನರು ಬೀರಿಲ್ಲ ಎಂದು ತಿಳಿಸಿದ್ದರೆ.

**6. ಜಾನಪದ ಕಲೆಗಳು ಮತ್ತು ಕ್ರೀಡೆಗಳು ಇಂದಿಗೂ ಉಳಿದಿವೆಯೇ?**

ಬನ್ನಿಕೊಡು 18(100%) ಸಲಗನಹಳ್ಳಿ 20(100%) ಕೆ.ಬೇವಿನಹಳ್ಳಿ 16(100%) ಗಳ ಜನರು ಶೇಕಡ ತೋರಿಸಿರುವಂತೆ ಜಾನಪದ ಕಲೆಗಳು ಮತ್ತು ಕ್ರೀಡೆಗಳು ಇಂದಿಗೂ ಉಳಿದಿವೆಯೇ ಎಂದು ತಿಳುಹಿಸಿವೆ. ಅದೇರೀತಿ ಕ್ರಮವಾಗಿ

ಬೆಳ್ಳೂಡಿ ಶೇ 08% ರಷ್ಟು ಪ್ರಭಾವ ಬೀರತ್ತಿಲ್ಲ ಎಂದು ತಿಳುಹಿಸಿದೆ. ಒಟ್ಟಾರೆಯಾಗಿ ಹೇಳುವುದಾದರೆ ಶೇಕಡ 100% ರಷ್ಟು ಜನರಲಿ 82.5ರಷ್ಟು ಜನರು ಆಧುನಿಕ ಮಾಧ್ಯಮಗಳು ಜಾನಪದ ಕಲೆಗಳ ಮೇಲೆ ನಕಾರಾತ್ಮಕ ಪರಿಣಾಮವನ್ನ ಬೀರುತ್ತಿವೆ ಎಂದು ತಿಳಿಸಿದರೆ 17.5 ಜನರು ಬೀರಿಲ್ಲ ಎಂದು ತಿಳಿಸಿದ್ದರೆ.

**7. ಇಂದಿನ ಯುವಕರ ನಿರ್ಲಕ್ಷ್ಯದಿಂದ ಜಾನಪದ ಕಲೆಗಳು ನಶಿಸುತ್ತಿಯೇ?**

ಬನ್ನಿಕೊಡು 18(100%) ಸಲಗನಹಳ್ಳಿ 20(100%) ಕೆ.ಬೇವಿನಹಳ್ಳಿ 16(100%) ಗಳ ಜನರು ಶೇಕಡ ತೋರಿಸಿರುವಂತೆ ಜಾನಪದ ಕಲೆಗಳು ಮತ್ತು ಕ್ರೀಡೆಗಳು ಇಂದಿಗೂ ಉಳಿದಿವೆಯೇ ಎಂದು ತಿಳುಹಿಸಿವೆ. ಅದೇರೀತಿ ಕ್ರಮವಾಗಿ ಬೆಳ್ಳೂಡಿ ಶೇ 08%ರಷ್ಟು ಪ್ರಭಾವ ಬೀರುತ್ತಿಲ್ಲ ಎಂದು ತಿಳುಹಿಸಿದೆ. ಒಟ್ಟಾರೆಯಾಗಿ ಹೇಳುವುದಾದರೆ ಶೇಕಡ 100% ರಷ್ಟು ಜನರಲ್ಲಿ 82.5 ರಷ್ಟು ಜನರು ಆಧುನಿಕ ಮಾಧ್ಯಮಗಳು ಜಾನಪದ ಕಲೆಗಳ ಮೇಲೆ ನಕಾರಾತ್ಮಕ ಪರಿಣಾಮವನ್ನ ಬೀರುತ್ತಿವೆ ಎಂದು ತಿಳಿಸಿದರೆ 17.5 ಜನರು ಬೀರಿಲ್ಲ ಎಂದು ತಿಳಿಸಿದ್ದಾರೆ.

**8. ಪ್ರಸ್ತುತ ಜಾನಪದ ಕಲಾವಿದರ ಪರಿಸ್ಥಿತಿ ಯಾವ ರೀತಿಯಲ್ಲಿದೆ?**

ಹರಿಹರ ತಾಲ್ಲೂಕಿನ ಬನ್ನಿಕೊಡು ಗ್ರಾಮದ ಶಾಂತಕುಮಾರ ಎಂಬುವವರುಜಾನಪದ ಕಲಾವಿದರ ಪರಿಸ್ಥಿತಿ ಕುರಿತು "ಜಾನಪದ ಕಲಾವಿದರ ಜೀವನ ಅಳಿವಿನಂಚಿನಲ್ಲಿದೆ. ಜಾನಪದ ಕಲೆಗಳ ಬಗ್ಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿಲ್ಲ" ಎಂದಿದ್ದಾರೆ. ಹರಿಹರ ತಾಲ್ಲೂಕಿನ ಸಲಗನಹಳ್ಳಿ ಗ್ರಾಮದ ಮಧು ಬಿ.ಬಿ ಎನ್ನುವವರು "ಆಧುನಿಕ ಮಾಧ್ಯಮಗಳ ಕಾರಣದಿಂದ ಜಾನಪದ ಕಲಾವಿದರ ಪರಿಸ್ಥಿತಿ ಪ್ರಸ್ತುತ ದಿನಗಳಲ್ಲಿ ತುಂಬಾ ಕೆಟ್ಟ ಪರಿಸ್ಥಿತಿಯಲ್ಲಿದೆ ಎಂದಿದ್ದಾರೆ.ಹರಿಹರ ತಾಲ್ಲೂಕಿನ ಬಳ್ಳೂಡಿ ಗ್ರಾಮದ ಶಂಕರ ಜಿ.ಪಿ ಎಂಬುವವರು "ಜಾನಪದ ಕಲಾವಿದರಿಗೆ ಸಿಗಬೇಕಾದ ನಿಜವಾದ ಸೌಲಭ್ಯ ಮಹತ್ವಗಳು ಸಿಗುತ್ತಿಲ್ಲ, ಜಾನಪದ ಕಲೆ ಮತ್ತು ಕಲಾವಿದರು ಸ್ಥಿತಿ ಶೋಚನಿಯವಾಗಿದೆ" ಎಂದಿದ್ದಾರೆ.ಹರಿಹರ ತಾಲ್ಲೂಕಿನ ಬೆಳ್ಳೂಡಿ ಕೆ.ಬೇವಿನಹಳ್ಳಿ ಗ್ರಾಮದ ರಾಮಚಂದ್ರಪ್ಪ ಎಂಬುವವರು. "ಜಾನಪದ ಕಲಾವಿದರ ಪರಿಸ್ಥಿತಿ ಹೇಳಲು ಕಷ್ಟಕರ ಅವರಿಗೆ ಅಗತ್ಯವದ ಸಲಕರಣೆಗಳನ್ನು ಪಡೆಯಲು ಸಹ ಆರ್ಥಿಕವಾಗಿ ಹಿಂದುಳಿದಿದ್ದಾರೆ" ಎಂದಿದ್ದಾರೆ. ಇಂದು ಪಾಶ್ಚಿಮಾತ್ಯ ಸಂಸಕೃತಿಯು ಯುವಕರನ್ನು ಆಕರ್ಷಣೆ ಮಾಡುತ್ತಿದ್ದು ಜಾನಪದ ಕಲೆಗಳನ್ನು ಬಿಟ್ಟು ಬೇರೆ ಸಂಸ್ಕೃತಿಯ ಕಡೆ ಒಲವು ತೋರುತ್ತಿದ್ದಾರೆ. ಇಂದಿನ ಕಾಲದಲ್ಲಿ ಆಧುನಿಕ ತಂತ್ರಜ್ಞಾನಗಳು ಹೆಚ್ಚು ಬೆಳವಣಿಗೆಯಿಂದಾಗಿ ಜಾನಪದ ಕಲೆಗಳು ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತಿದ್ದು ಇಂದಿನ ಜನರು ಹಾಗೂ ಯುವ ಪೀಳಿಗೆಯು ಆಸಕ್ತಿಯನ್ನು ಕಳೆದುಕೊಳ್ಳುತ್ತಿರುವುದರಿಂದ ಕಲಾವಿದರೂ ಕೂಡ ತಮ್ಮ ಕಲೆಗಳನ್ನು ಮರೆತು ಬೇರೆಡೆಗೆ ತಮ್ಮ ಒಲವನ್ನ ತೋರುತ್ತಿರುವುದು ವಿಶಾದನಿಯವಾಗಿದೆ.

**9. ನಿಮ್ಮ ಗ್ರಾಮದಲ್ಲಿ ಯಾವ ಬಗೆಯ ಜಾನಪದ ಕಲೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ?**

ಹರಿಹರ ತಾಲ್ಲೂಕಿನ ಬನ್ನಿಕೋಡು ಗ್ರಾಮದ ರಾಮಪ್ಪ ಎನ್ನುವವರು ನಮ್ಮ ಊರಿನಲ್ಲಿ ಭಜನೆ,ಕೋಲಾಟ,ಸೋಬಾನೆ ಗೀತೆಗಳನ್ನು ಇಂದಿಗೂ ಹೇಳುತ್ತಾರೆ. ಹಾಗೂ ಮನರಂಜನೆಗಾಗಿ ಎಂದು ಹೇಳಿದ್ದಾರೆ.ಹರಿಹರ ತಾಲ್ಲೂಕಿನ ಕೆ.ಬೇವಿನಹಳ್ಳಿ ಗ್ರಾಮದ ಕಿರಣ್ ಎಂಬುವವರು ನಾಟಕ ಮತ್ತು ವೀರಗಾಸೆ,ಹರಿಕಥೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಗ್ರಾಮೀಣ ಬಾಗದ ಜನರು ದೇವರ ನಂಬಿಕೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ ಹಾಗಾಗಿ.ಹರಿಹರ ತಾಲ್ಲೂಕಿನ ಸಲಗನಹಳ್ಳಿಯ ಶ್ರೀಶೈಲ ಎಂಬುವವರು ವೀರಗಾಸೆ,ಡೊಳ್ಳು ಕುಣಿತ,ಬಯಲಾಟ, ಇವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ ಕಾರಣ ಅಸ್ತಿತ್ವ ನಮ್ಮ ಭಾಗದಲ್ಲಿ ಹೆಚ್ಚಾಗಿದೆ ಎಂದಿದ್ದಾರೆ.ಗ್ರಾಮೀಣ ಭಾಗದ ಜನರು ಜಾನಪದ ಕಲೆಗಳಿಗೆ ಹೆಚ್ಚಿನದಾಗಿ ಆಸಕ್ತಿಯನ್ನ ವಹಿಸುತ್ತಿದ್ದು ಜಾತ್ರೆ, ಹಬ್ಬ-ಹರಿದಿನಗಳಲ್ಲಿ ತಮ್ಮ ಕಲೆಯನ್ನ ಪ್ರದರ್ಶಿಸಿಕೊಳ್ಳಲು ಹಾಗೂ ರೂಡಿ ಸಂಪ್ರದಾಯಗಳನ್ನ ಮುಂದುವರೆಸಿಲು ಮನರಂಜನೆಗಾಗಿ ಪ್ರಾಮುಖ್ಯತೆಯನ್ನ ನೀಡಲಾಗುತ್ತಿದೆ.

**10. ಆಧುನಿಕ ಮಾಧ್ಯಮಗಳ ಮೇಲಿನ ಆಸಕ್ತಿ ಜಾನಪದ ಕಲೆಯ ಮೇಲೆ ಏಕಿಲ್ಲ?**

ಹರಿಹರ ತಾಲ್ಲೂಕಿನ ಬನ್ನಿಕೋಡು ಶಾಂತಕುಮಾರ್ ಎಂಬುವವರು ಆಧುನಿಕ ಮಾಧ್ಯಮಗಳು ಜನರನ್ನು ಮತ್ತು ಯುವ ಪೀಳಿಗೆಯನ್ನು ಹೆಚ್ಚು ಆಕರ್ಷಿಸುತ್ತಿದೆ. ಆದರೆ ಜಾನಪದ ಕಕಲೆ ಯುವಜನರ ಮೇಲೆ ಪ್ರಭಾವ ಬೀರುತ್ತಿಲ್ಲ.ಹರಿಹರ ತಾಲ್ಲೂಕಿನ ಕೆ.ಬೇವಿನಹಳ್ಳಿ ಮುಂಡಲಿಕ ಎಂಬುವವರು ಇಂದಿನ ಯುವ ಪೀಳಿಗೆಗೆ ಜಾನಪದ ಕಲೆಯ ಮೇಲೆ ಆಸಕ್ತಿ ಇಲ್ಲ ಏಕೆಂದರೆ ಮಾಧ್ಯಮಗಳಲ್ಲಿ ಸಿಗುವ ಸೌಲಭ್ಯ ಮನರಂಜನೆ ಜಾನಪದ ಕಲೆಯಲ್ಲಿ ಸಿಗುತ್ತಿಲ್ಲವೆಂಬ ಕಾರಣಕ್ಕೆ ಎಂದಿದ್ದಾರೆ.ಹರಿಹರ ತಾಲ್ಲೂಕಿನ ಬೆಳ್ಳೂಡಿ ಗ್ರಾಮದ ಮಧು ಬಿ.ಬಿ ಎನ್ನುವವರು ಪ್ರಸ್ತುತ ದಿನಮಾನಗಳಲ್ಲಿಆಧುನಿಕ ಮಾಧ್ಯಮಗಳಾದ ರೇಡಿಯೋ ಟಿ.ವಿ,ವಾಟ್ಸಪ್,ಯುವಕರ ಮೇಲೆ ಹೆಚ್ಚು ಪ್ರಭಾವ ಬೀರಿದ್ದರಿಂದ.ಹರಿಹರ ತಾಲ್ಲೂಕಿನ ಸಲಗನಹಳ್ಳಿ ಗ್ರಾಮದ ಗುರುಸ್ವಾಮಿ ಎಂಬುವವರು ಜಾನಪದ ಕಲೆಯ ಮೇಲೆ ಯಾಕೆ ಆಸಕ್ತಿಯಿಲ್ಲ ಎಂದರೆ ಆಧುನಿಕ ಮಾಧ್ಯಮಗಳು ಹೆಚ್ಚಾಗಿ ಬೇರೆ ಬೇರೆ ರೀತಿಯಾದಂತಹ ಚಟುವಟಿಕೆಗಳಲ್ಲಿ ತೋರಿಸುವಂತಹದ್ದು.ಇಂದಿನ ಯುವ ಸಮುದಾಯ ತಂತ್ರಜ್ಞಾನ ಮುಂದುವರೆದಂತೆ ಅಲ್ಲದೆ ಯುವಕರ ಆಸಕ್ತಿ ಅಭಿರುಚಿಗಳು ಬದಲಾಗುತ್ತಾ ಹೋಗುತ್ತವೆ. ಜಾನಪದ ಕಲೆಗಳ ಮೇಲಿನ ಆಸಕ್ತಿ ಕುಂದಿ ಹೋಗುತ್ತಿದ್ದು, ಆಧುನಿಕ ಮಾಧ್ಯಮಗಳು ನೀಡುವಂತಹ ತೃಪ್ತಿಯನ್ನ ಜಾನಪದ ಮಾಧ್ಯಮಗಳು ಇಂದಿನ ಯುವ ಸಮುದಾಯಕ್ಕೆ ದೊರಕುತ್ತಿಲ್ಲ ಎನ್ನುವಂತಹದ್ದಾಗಿದೆ.

**11. ಇಂದಿನ ಯುವಕ ಯುವತಿಯರು ಜಾನಪದ ಕಲೆಯನ್ನು ನಿರ್ಲಕ್ಷಿಸುತ್ತಿದ್ದಾರೆಯೇ? ಹೌದಾದರೆ ಯಾವ ಕಾರಣಕ್ಕಾಗಿ ನಿರ್ಲಕ್ಷಿಸುತ್ತಿದ್ದಾರೆ?**

ಹರಿಹರ ತಾಲ್ಲೂಕಿನ ಸಲಗನಹಳ್ಳಿ ಗ್ರಾಮದ ರುದ್ರೇಶ್ ಬಿ ಎನ್ನುವವರು ಹೌದು ಎನ್ನುತ್ತಾ ಆಧುನಿಕ ಮನರಂಜನಾ ಕಲೆಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿವೆ. ಎನ್ನುವಂತಹ ಮಾತನ್ನ ಹೇಳಿದ್ದಾರೆ. ಹರಿಹರ ತಾಲ್ಲೂಕಿನ ಬನ್ನಿಕೊಡು ಗ್ರಾಮದ ಶಂಭುಲಿಂಗ ಎನ್ನುವವರು ಹೌದು ಎನ್ನುತ್ತಾ ಇಂದಿನ ಎಲ್ಲಾ ಯುವತಿಯರು ಪ್ರಸ್ತುತ ದಿನಗಳಲ್ಲಿ ಮೊಬೈಲ್‌ನಿಂದ ಜಾನಪದ ಕಲೆಯನ್ನು ನಿರ್ಲಕ್ಷಿಸಲು ಕಾರಣವಾಯಿತು ಹರಿಹರ ತಲ್ಲೂಕಿನ ಬೆಳ್ಳೂಡಿ ಗ್ರಾಮದ ರವಿಕುಮಾರ ಎನ್ನುವವರು ಹೌದು ಎನ್ನುತ್ತಾ ಇತ್ತೀಚಿನ ಪ್ರಚಲಿತ ವಿದ್ಯಮಾನಗಳು ಮುಂದುವರಿದ ಜಾಗತಿಕ ಮಟ್ಟ ವಿದ್ಯುನ್ಮಾನಗಳು, ತಂತ್ರಜ್ಞಾನಗಳೆ ಕಾರಣ ಎಂದಿದ್ದಾರೆ. ಹರಿಹರ ತಾಲ್ಲೂಕಿನ ಕೆ.ಬೇವಿನಹಳ್ಳಿ ಗ್ರಾಮದ ಶಾಂತಕುಮಾರ ಎನ್ನುವವರು ಹೌದು ಎನ್ನುತ್ತಾ ಇಂದಿನ ಯುವಕ ಯುವತಿಯರು ಆಧುನಿಕ ಮಾಧ್ಯಮಗಳ ಬಳಕೆ ಮಾಡುತ್ತಿದ್ದಾರೆ. ಅವರ ಜೀವನ ಆಧುನಿಕ ಮಾಧ್ಯಮಗಳನ್ನು ಅವಲಂಬಿಸಿದೆ.

ಇಂದಿನ ಆಧುನಿಕ ಮಾಧ್ಯಮಗಳು ಯುವಕರನ್ನ ತನ್ನತ್ತ ಸೆಳೆಯುತ್ತಿದ್ದು ಜಾನಪದ ಕಲೆಯ ಕಡೆ ಮುಖ ಮಾಡದಂತೆ ಮಾಡುತ್ತಿವೆ. ಅಲ್ಲದೆ ಸಮಾಜದಲ್ಲಿ ಜಾನಪದ ಕಲೆಗಳಿಗಿರುವಂತಹ ಬೆಲೆ ಕಡಿಮೆಯಾಗುತ್ತಿದೆ ಎನ್ನುವಂತಹದ್ದನ್ನ ನಾವು ನೋಡ ಬಹುದಾಗಿದೆ.

**ಉಪಸಂಹಾರ:** ಜಾನಪದ ಕಲೆಗಳು ಜನಪದ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. ಧಾರ್ಮಿಕ ಹಾಗೂ ಲೌಕಿಕ ಸ್ವರೂಪದ ಕಲೆಗಳು ತಮ್ಮದೇ ಆದ ಸಂಪ್ರಪಾಯಗಳನ್ನು ಬೆಲೆಸಿಕೊಂಡು ಜನ ಜೀವನದ ಮೇಲೆ ಪ್ರಭಾವವನ್ನು ಬೀರುತ್ತ ಬಂದಿವೆ. ನಾಗರಿಕೆಯು ಕಡಿಮೆಯಿದ್ದ ದಿನಗಳಲ್ಲಿ ಈ ಕಲೆಗಳೇ ಮನರಂಜನೆಯ ಮುಖ್ಯ ಸಾಧನಗಳಾಗಿ ಮೆರೆದಿದ್ದವು. ದೈವಾರಾದನೆಯ ಒಂದು ಅಂಗವಾಗಿಯೂ ಇವ್ರೂ ಬೆಳೆದು ಬಂದಿದ್ದನ್ನ ನೋಡಬಹುದಾಗಿದೆ. ವೀರಗಾಸೆ,ಡೊಳ್ಳು ಕುಣಿತ,ಭೂತಕೋಲು,ಯಕ್ಷಗಾನ, ಇವುಗಳು ದೈವಾರದನೆಯ ಜೊತೆಗೆ ಜಾನಪದ ಮನರಂಜನೆಯನ್ನು ನೀಡುತ್ತಾ ಬಂದಿವೆ.

ಕೋಲಾಟ, ಗೊಂಬೆಯಾಟಗಳು ಅನೇಕ ಸಂದರ್ಭಗಳಲ್ಲಿ ಚೌಕಟ್ಟಿಗೂ ಒಳಪಡುತ್ತವೆ. ಹಬ್ಬ ಹರಿದಿನಗಳಲ್ಲಿ ದೇವರ ಉತ್ಸವಾದಿಗಳಲ್ಲಿ ವಿಶೇಷ ದಿನಗಳಲ್ಲಿ ಈ ಕಲೆಗಳ ಪ್ರದರ್ಶನವೂ ಆಚರಣೆಯ ಒಂದು ಅಂಗವಾಗಿ ಸೇರಿ ಹೋಗಿರುತ್ತದೆ. ಹೀಗೆ ಎಲ್ಲ ಜಾನಪದ ಕಲೆಗಳಲ್ಲಿ ಒಂದಲ್ಲಾ ಒಂದು ರೀತಿಯ ಧಾರ್ಮಿಕ ಪ್ರಭಾವ ಕಂಡೆ ಕಾಣುತ್ತದೆ.

ಯುವಕರಲ್ಲಿ ಜಾನಪದ ಕಲೆಗಳ ಬಗ್ಗೆ ಅರಿವು ಕಡಿಮೆಯಾಗುತ್ತಿದೆ: ಜಾನಪದ ಕಲೆಗಳು ಅಳಿವಿನಂಚಿನಲ್ಲಿದ್ದ, ಇಂದಿನ ಯುವ ಸಮುದಾಯದಲ್ಲಿ ಜಾನಪದ ಕಲೆಗಳ ಬಗ್ಗೆ ಅರಿವು ಕಡಿಮೆಯಾಗುತ್ತಿದೆ. ಹೊಸ ಮಾಧ್ಯಮಗಳ ಬಳಕೆಯಲ್ಲಿ ಯುವ ಸಮುದಾಯ ಮುಂದೆ ಸಾಗುತ್ತಿದೆ ಅಲ್ಲದೆ ರೂಡಿ ಸಂಪ್ರಾದಾಯಗಳು ಆಚಾರ ಪದ್ದತಿಗಳು, ಕಾಲಕ್ರಮೇಣವಾಗಿ ನಶಿಸುತ್ತಿದ್ದು ಯುವಜನತೆಯಲ್ಲಿನ ಜಾನಪದ ಕಲೆಗಳ ಆಸಕ್ತಿ ಕುಂದಿ ಹೋಗುತ್ತಿದೆ. ಯುವಕರು ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಜಾನಪದ ಕಲೆಗಳ ಬಗ್ಗೆ ತಿಳಿದುಕೊಳ್ಳುವಂತಹ ಮನೋಬಾವನೆಯೂ ಕೂಡ ಯುವಕರಲ್ಲಿ ಇಲ್ಲದಂತಾಗಿದೆ. ಅಲ್ಲದೆ ಜಾನಪದ ಕಲೆಗಳೆಂದರೆ ಯಾವು ಎಂಬುದು ಕೂಡ ಅವರಿಗೆ ಗೊತ್ತಿಲ್ಲದಂತಾಗಿದೆ. ನಮ್ಮ ಗ್ರಾಮೀಣ ಭಾಗದಲ್ಲಿನ ಜನರಲ್ಲಿ ಹಿಂದಿನ ದಿನಮಾನಗಳಲ್ಲಿ ಜಾನಪದ ಕಲೆಗಳಿಗೆ ಅವರು ನೀಡುತ್ತಿದ್ದಂತಹ ಮಹತ್ವ ಇಂದು ಕಾಲ ಕ್ರಮೇಣ ಕಡಿಮೆಯಾಗುತ್ತಿದ್ದು ಪಾಶ್ಚೀಮಾತ್ಯ ಸಂಸ್ಕೃತಿಯು ಇವರ ಹೆಗಲೇರುತ್ತಿದೆ. ಜೊತೆಗೆ ಮನೆಯ ಹಿರಿಯರು ಕೂಡ ಜಾನಪದ ಕಲೆಗಳ ಕುರಿತು ತಿಳಿಸುವಂತಹ ಮನೋಭಾವನೆಯೂ ಇಂದಿನ ಹಿರಿಯರಲ್ಲಿ ಇಲ್ಲದಂತಾಗಿದೆ. ಎನ್ನುವಂತಹದ್ದು ಈ ಸಂಶೋದನೆಯಿಂದ ನಮಗೆ ತಿಳಿದು ಬರುತ್ತದೆ.

ಯುವ ಪೀಳಿಗೆಯ ಮೇಲೆ ಆಧುನಿಕ ಮಾಧ್ಯಮಗಳ ಪ್ರಭಾವ : ಇಂದಿನ ಯುವ ಪೀಳಿಗೆಯ ಮೇಲೆ ಆಧುನಿಕ ಮಾಧ್ಯಮಗಳ ಪ್ರಭಾವ ಎಷ್ಟರ ಮಟ್ಟಿಗೆಯಿಂದ ಎಂದರೆ ಇಂದು ಹೊಸ ಮಾಧ್ಯಮಗಳು ಅವರ ಜೀವನ ಒಂದು ಬಾಗವಾಗಿ ಕಾರ್ಯವನ್ನ ನಿರ್ವಹಿಸುತ್ತಿವೆ. ಈ ಸಂಶೋದನೆಯಲ್ಲಿ ನಮಗೆ ದೊರೆತಿರುವಂತಹ ದತ್ತಾಂಶದಂತೆ ಶೇ 74% ರಷ್ಟು ನಕಾರಾತ್ಮಕ ಪ್ರಭಾವವನ್ನ ಬೀರುತ್ತಿವೆಯೆಂದು ಒಪ್ಪಿದ್ದಾರೆ. ಇದರಂತೆ ನಮಗೆ ತಿಳಿಯುವುದೇನೆಂದರೆ ಆಧುನಿಕ ಮಾಧ್ಯಮಗಳು ಯುವಕರನ್ನ ದಾರಿ ತಪ್ಪಿಸುತ್ತಿವೆ ಎಂಬುನ್ನ ಒಪ್ಪಿರುತ್ತಾರೆ.ಬಹಳಷ್ಟು ಯುವಕರು ಆಧುನಿಕತೆಯ ಮೊಜಿನಲ್ಲಿ ಬಿದ್ದು ಜಾನಪದ ಕಲೆಗಳನ್ನು ಕಲಿಯಲು ನಿರಾಸಕ್ತಿಯನ್ನು ತೋರುತ್ತಾರೆ. ಆಧುನಿಕ ಮಾಧ್ಯಮಗಳು ಎಷ್ಟರ ಮಟ್ಟಿಗೆ ತಮ್ಮ ಪ್ರಭಾವ ಬೀರಿವೆ ಎಂದರೆ ಸಾಮಾನ್ಯ ಶಿಕ್ಷಣವನ್ನ ಪಡೆದಂತಹ ವ್ಯಕ್ತಿಯು ಕೂಡ ಆಧುನಿಕ ಮಾಧ್ಯಮಗಳನ್ನ ಬಳಸುತ್ತಿದ್ದಾರೆ. ಅತೀ ಕಡಿಮೆ ವೆಚ್ಚದಲ್ಲಿ ಆಧುನಿಕ ಮಾಧ್ಯಮಗಳು ತಮ್ಮ ಸೇವೆಯನ್ನ ನೀಡುತ್ತಿರುವುದು, ಮೊಬೈಲ್, ಟಿವಿ, ಕಂಪ್ಯೂಟರ್, ಅಂತರ್ಜಾಲದ ಸೇವೆಗಳು ಕಡಿಮೆ ವೆಚ್ಚದಲ್ಲಿ ಲಭ್ಯವಾಗುತ್ತಿದ್ದು ಅವುಗಳ ವ್ಯಾಪ್ತಿಯು ವಿಶಾಲವಾಗಿದೆ. ಅದೇ ರೀತಿ ಜಾನಪದ ಕಲೆಗಳ ಕಡಿಮೆ ಇರುವುದೂ ಕೂಡ ಇದಕ್ಕೆ ಪ್ರಮುಖ ಕಾರಣವಾಗಿದೆಯೆಂದು ಬಹಳಷ್ಟು ಜನರು ಅಭಿಪ್ರಾಯಿಸಿದ್ದಾರೆ.

ಜಾನಪದ ಕಲಾವಿದರ ಪರಿಸ್ಥಿತಿ ಚಿಂತಾಜನಕವಾಗಿದೆ : ಪ್ರಸ್ತುತ ಜಾನಪದ ಕಲೆಯೆಂಬುದು ತನ್ನದೆ ಆದಂತಹ ಮಹತ್ವವನ್ನ ಹೊಂದಿರುವುದಲ್ಲದೆ ಮನರಂಜನೆಯನ್ನ ನೀಡುವುದರ ಜೊತೆಗೆ ಉತ್ತಮ ಸಂದೇಶವನ್ನು ಸಹ ನೀಡುತ್ತಿದ್ದಂತಹ ಕಲೆ ಇಂದು ನಶಿಸುತ್ತಿದ್ದು ಆಧುನಿಕರಣದ ಪ್ರಭಾವದಿಂದ ಜಾನಪದ ಕಲಾವಿದರ ಪರಿಸ್ಥಿತಿ ಎನ್ನುವಂತಹದ್ದು ಕಾಲ ಕ್ರಮೇಣ ಮರೆಯಾಗುತ್ತಿದೆ. ಅಲ್ಲದೆ ಇಂದಿನ ಬಣ್ಣದ ಯುಗದಲ್ಲಿ ಸಿನಿಮಾ, ಧಾರವಾಹಿ, ರೀಯಾಲಿಟಿ ಶೋಗಳ ಮದ್ಯೆ ಜಾನಪದ ಕಲೆಗಳಾದ ದೊಡ್ಡಟ, ಬಯಲಾಟ, ಡೊಳ್ಳುಕುಣಿತ ಈ ರೀತಿಯ ಮುಂತಾದ ಕಲೆಗಳು ಕಲಾವಿದರು ಮರೆಯಾಗುತ್ತಿದ್ದಾರೆ. ಅಲ್ಲದೆ ಇಂದಿನ ಯುವಕರು ಆಧುನಿಕ ಮಾಧ್ಯಮಗಳ ಬಗ್ಗೆ ಅತೀ ಹೆಚ್ಚು ಆಸಕ್ತಿಯನ್ನ ವಹಿಸುತ್ತಿದ್ದು ಜಾನಪದ ಒಲವು ಕಡಿಮೆಯಾಗುತ್ತಿದೆ. ಅಲ್ಲದೆ ಇಂದಿನ ಯುಗದಲ್ಲಿ ಕಲಾವಿದರು ಅವರ ಖರ್ಚು ವೆಚ್ಚಗಳ ಬೆಲೆಯು ಅಧಿಕವಾಗಿದ್ದು ಅವರ ಜೀವನ ಶೈಲಿಯೂ ಕೂಡ ಬದಲಾಗುತ್ತಿದೆ. ಆಗಾಗಿ ಕಲಾವಿದರ ಪರಿಸ್ಥಿತಿ ಶೋಚನಿಯವಾಗಿದೆ.

ಜಾನಪದ ಕಲೆಗಳ ಪ್ರಭಾವದಿಂದ ಯುವಕರ ಜೀವನ ಶೈಲಿಯ ಮೇಲೆ ಪ್ರಭಾವ : ಯುವಕರು ಜಾನಪದ ಕಲೆಗಳನ್ನ ಪ್ರೀತಿಸುವಂತಹ ಕಾಲ ಇಂದು ಬದಲಾಗಿದೆ ನೂರಕ್ಕೆ ಶೇಕಡ ಹತ್ತರಷ್ಟು ಯುವಕರ ಮೇಲೆ ಈ ಜಾನಪದ ಕಲೆಯೆಂಬುದು ತನ್ನದೆ ಆದಂತಹ ಪ್ರಭಾವವನ್ನ ಬೀರಿದೆ. ಸಾಮಾಜಿಕ ಜಾಗೃತಿಯನ್ನ ಮೂಡಿಸುವಂತಹ ಬೀದಿ ನಾಟಕಗಳು, ಜಾನಪದ ಗೀತೆಗಳು, ಈಗೆ ಹಲವಾರು ರೀತಿಯ ಕಲೆಗಳು ಯುವಕರ ಮೇಲೆ ಪ್ರಭಾವನ್ನ ಬೀರಿವೆ.ಜಾನಪದ ಕಲೆಗಳು ಯುವಕರ ಜೀವನ ಶೈಲಿಯ ಮೇಲೆ ಹಲವಾರು ರೀತಿಯಲ್ಲಿ ತಮ್ಮ ಕಲೆಯ ಆಸಕ್ತಿಯನ್ನ ಉಣಬಡಿಸಿವೆ. ಜಾನಪದ ಕಲೆಗಳು ಯುವಕರ ಮೇಲೆ ಹಳೆಯ ಸಂಪ್ರದಾಯ ಸಂಬಂಧಗಳನ್ನ ತಿಳುಹಿಸುವಂತಹದ್ದು ಜೊತೆಗೆ ಜೀವನ ಪದ್ಧತಿಗಳನ್ನ ಉಡುಗೆ ತೊಡುಗೆಗಳನ್ನ ತಮ್ಮ ಜಾನಪದ ಕಲೆಯ ಮೂಲಕ ತಿಳುಹಿಸುವಂತಹದ್ದನ್ನ ನೋಡಬಹುದು

ಜಾನಪದ ಕಲೆಯಲ್ಲಿ ಇಂದಿನ ಯುವಕರು ಎಷ್ಟರ ಮಟ್ಟಿಗೆ ಆಸಕ್ತಿಯನ್ನು ಹೊಂದಿದ್ದಾರೆ ಎಂದು ತಿಳಿಯುವಲ್ಲಿ ಈ ಸಂಶೋದನೆಯ ಸಹಾಯಕವಾಗಿದೆ. ಈ ಸಂಶೋದನೆಯಿಂದ ನಮಗೆ ತಿಳಿಯುವುದೇನೆಂದರೆಎ ಇಂದಿನ ಯುವಕರು ಆಧುನಿಕ ಮಾಧ್ಯಮಗಳ ವ್ಯಾಮೋಹಕ್ಕೆ ಬಿದ್ದು ಜಾನಪದ ಕಲೆಗಳನ್ನು ಮರೆಯುತ್ತಿದ್ದಾರೆ. ಅದರಲ್ಲೂ ಸಾಮಾಜಿಕ ಜಾಲತಾಣಗಳು ಯುವ ಜನರನ್ನು ಆಕರ್ಷಣೆ ಮಾಡುತ್ತಿದ್ದು ತನ್ನತ್ತ ಸೆಳೆಯುತ್ತಿವೆ. ಇದು ಕೇವಲ ನಮ್ಮ ದೇಶವಷ್ಟೆ ಅಲ್ಲ ಅನೇಕ ಮುಂದುವರಿದ ದೇಶಗಳೂ ಕೂಡ ಇದೇ ದೊಡ್ಡ ಸವಾಲಗಿ ಪರಿಣಮಿಸಿದೆ.ಇಂದು ನಡೆಯುವಂತಹ ಸಂಶೋದನೆಗಳು ಮಾಧ್ಯಮಗಳಲ್ಲಿ ಹೊಸ ಹೊಸ ಪ್ರಯೋಗವನ್ನು ಮಾಡುತ್ತಿದ್ದು ಜಾನಪದ ಕಲೆಗಳ ಅಳಿವಿಗೆ ಕಾರಣವಾಗಿದೆ. ಇದೇರೀತಿ ಮುಂದುವರಿದರೆ ಕೊನೆಗೆ ನಮ್ಮ ಕಲೆಗಳಿಗೆ ಬದಲಾಗಿ ಪಾಶ್ಚಿಮಾತ್ಯ ಕಲೆ ಸಂಸ್ಕೃತಿಗಳು ಈ ದೇಶವನ್ನು ಆಕ್ರಮಿಸಿಕೊಂಡರೆ ಆಶ್ಚರ್ಯಪಡಬೇಕಾಗಿಲ್ಲ.

ಇಂದಿನ ಪ್ರಪಂಚದಲ್ಲಿ ಜನರು ಜಾನಪದ ಕಲೆಗಳಿಗೆ ಮಹತ್ವವನ್ನು ನೀಡುತ್ತಿಲ್ಲ. ಚೀನ ಭಾರತದಂತಹ ಸಾಂಪ್ರದಾಯಿಕ ರಾಷ್ಟ್ರಗಳು ತಮ್ಮ ಕಲೆ ಸಂಪ್ರದಾಯಗಳನ್ನು ಉಳಿಸಿಕೊಳ್ಳಲು ಹರ ಸಾಹಸ ಪಡಬೇಕಾಗಿದೆ. ಏಕೆಂದರೆ ಆಧುನಿಕ ಮಾಧ್ಯಮಗಳು ಅಷ್ಟರ ಮಟ್ಟಿನಲ್ಲಿ ತನ್ನ ಪ್ರಭಾವವನ್ನು ಬೀರಿವೆ. ಆದ್ದರಿಂದ ಇಲ್ಲಿಯವರೆಗೂ ಜಾನಪದ ಕಲೆಗಳಲ್ಲಿ ಆಸಕ್ತಿಯನ್ನು ಹೊಂದಿದಂತಹ ದೇಶಗಳು ಇಂದು ಆಧುನಿಕತೆಯ ವ್ಯಾಮೋಹದಲ್ಲಿ ಮುಳುಗಿರುವುದು ದುರದೃಷ್ಟಕರ ಸಂಗತಿ.

**ಆಧಾರ ಗ್ರಂಥಗಳು:**


1. ಜೀ.ಶಂ.ಪರಮಶಿವಯ್ಯ. ಜನಪದ ಕಾವ್ಯಪ್ರಕಾರಗಳು. ಪ್ರಕಾಶಕರು: ಪ್ರಸಾರಾಂಗ ಮೈಸೂರು ವಿ.ವಿ.. ಪು.ಸ.
2. ರಾವ್ ರಂಗನಾಥ್.ಜಿ.ಎನ್. (ಜುಲೈ–2005) ಪತಿಕೋಧ್ಯಮ ಭಾಗ–1, ಕಾಮಧೇನು ಪ್ರಕಾಶನ, ಬೆಂಗಳೂರು.
3. ಶೇಖರ್ ಚಂದ್ರ.ಬಿ.ಎಸ್. (2003) ಸಂವಹನ ಮಾಧ್ಯಮಗಳು, ಹಂಪಿ ಪ್ರಕಾಶನ, ಬೆಂಗಳೂರು,
4. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿವಿ, ಮೈಸೂರು–570006
5. ಶ್ರೀ ವೀರಭದ್ರ ದೇವರ ವಡಪುಗಳು, ಸಂಗ್ರಹ ಶಂಕ್ರಪ್ಪ ಬಸಪ್ಪ ತೊಂಡಿಹಾಳ್, ಪಾರು ಪ್ರಕಾಶನ ಗದಗ.
6. ರಾಜಶೇಖರ್ ಹನುಮಲಿ ವೀರಗಾಸೆ ಪುಸ್ತಕ.ಪು.ಸಂ 5 ರಿಂದ 21 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪು.ಸಂ.32 ಡಾ.ವಿರೂಪಾಕ್ಷಿ ಪೂಜಾರಹಳ್ಳಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಕರ್ನಾಟಕ ಜನಪದ ಸ್ರೀ ದೈವಗಳ ಸಾಂಸ್ಕೃತಿಕ ಪದಕೋಶ, ಪು.ಸಂ.124 ಪ್ರೊ.ಮಂಜುನಾಥ್ ಬೇವಿನಕಟ್ಟಿ.